ಕರ್ನಾಟಕ ರಾಜ್ಯಪತ್ರ

ಅಧಿಕೃತವಾಗಿ ಪ್ರಕಟಿಸಲಾದುದು

ಸಂಪುಟ ೧೬೧	ಮೈಸೂರು, ಮಂಗಳವಾರ, ೨೪, ಮಾರ್ಚ್, ೨೦೨೬ (ಚೈತ್ರ ,೦೩, ಶಕವರ್ಷ, ೧೯೪೮)	ಸಂಚಿಕೆ ೨೨
Volume 161	MYSURU, TUESDAY, 24, MARCH , 2026 (CHAITHRA , 03, SHAKAVARSHA, 1948)	Issue 22

ಭಾಗ ೬ಎ

ಮೈಸೂರು ವಿಭಾಗಕ್ಕೆ ಮತ್ತು ಮೈಸೂರು, ಮಂಡ್ಯ, ಹಾಸನ, ಚಿಕ್ಕಮಗಳೂರು, ದಕ್ಷಿಣಕನ್ನಡ, ಕೊಡಗು, ಚಾಮರಾಜನಗರ, ಉಡುಪಿ ಜಿಲ್ಲೆಗಳಿಗೆ ಅನ್ವಯವಾಗುವ ಅಧಿಸೂಚನೆಗಳು ಮತ್ತು ಆದೇಶಗಳು.

ಜಿಲ್ಲಾಧಿಕಾರಿ ಹಾಗೂ
ಜಿಲ್ಲಾ ದಂಡಾಧಿಕಾರಿಯವರ ಕಾರ್ಯಾಲಯ
ಉಡುಪಿ ಜಿಲ್ಲೆ, "ರಜತಾದ್ರಿ"
ಮಣಿಪಾಲ, ಉಡುಪಿ – 576104
Email: udupidc@gmail.com

(ಕಂದಾಯ ಇಲಾಖೆ)

Deputy Commissioner &
District Magistrate's Office,
Udupi District, " Rajatadri",
Manipal, Udupi - 576104
Office: 0820-2574924, 2574925

ಸಂ: ಗಭೂಇ/ಹಿಭೂ(ಉಡುಪಿ)/ಮರಳು ಬ್ಲಾಕ್‌ಗಳು/ಅಧಿಸೂಚನೆ/2025-26 ದಿನಾಂಕ: 09-03-2026

ಅಧಿಸೂಚನೆ

ವಿಷಯ: ಹೊಸ ಮರಳು ನೀತಿ 2020 ಮತ್ತು ಕರ್ನಾಟಕ ಉಪಖನಿಜ ರಿಯಾಯಿತಿ ನಿಯಮಾವಳಿ 1994 ರ ತಿದ್ದುಪಡಿ ನಿಯಮ 2021, 2023 & 2024 ರನ್ವಯ ಉಡುಪಿ ಜಿಲ್ಲೆಯ NON CRZ ವ್ಯಾಪ್ತಿಯ I, II & III ನೇ ಶ್ರೇಣಿಯ ಹಳ್ಳ/ ತೊರೆ ಮತ್ತು ಕೆರೆಗಳಲ್ಲಿ ಗುರುತಿಸಿರುವ ಮರಳು ಬ್ಲಾಕ್ ಗಳಲ್ಲಿ ಮರಳು ತೆರವುಗೊಳಿಸಲು ಸಂಬಂಧಪಟ್ಟ ಗ್ರಾಮಪಂಚಾಯತ್ ಗಳಿಗೆ ಆಶಯ ಪತ್ರ ನೀಡಲು ಅಧಿಸೂಚನೆ ಹೊರಡಿಸುವ ಕುರಿತು.

ಉಲ್ಲೇಖ:1. ಸರ್ಕಾರದ ಆದೇಶ ಸಂಖ್ಯೆ: ಸಿಐ 344 ಎಂಎಂಎನ್ 2019, ಬೆಂಗಳೂರು, ದಿನಾಂಕ: 05.05.2020.

2. ಕರ್ನಾಟಕ ಉಪಖನಿಜ ರಿಯಾಯಿತಿ ನಿಯಮಾವಳಿ 1994 ರ ತಿದ್ದುಪಡಿ ನಿಯಮ 2021, 2023 & 2024.

3. ದಿನಾಂಕ: 19.01.2026 ರಂದು ನಡೆದ ತಾಲ್ಲೂಕು ಮರಳು ಉಸ್ತುವಾರಿ ಸಮಿತಿ ಸಭೆಯ ನಿರ್ಣಯದಂತೆ.

4. ದಿನಾಂಕ: 06.02.2026 ರಂದು ನಡೆದ ಜಿಲ್ಲಾ ಮರಳು ಉಸ್ತುವಾರಿ ಸಮಿತಿ ಸಭೆಯ ನಿರ್ಣಯದಂತೆ.

******

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಕರ್ನಾಟಕ ಸರ್ಕಾರವು ಭೌಗೋಳಿಕ, ಭೂವೈಜ್ಞಾನಿಕ ಮತ್ತು ಆಡಳಿತಾತ್ಮಕ ಹಿನ್ನೆಲೆಯನ್ನು ಪರಿಗಣಿಸಿ, ಸರ್ಕಾರಿ ಮತ್ತು ಸಾರ್ವಜನಿಕ ಅಭಿವೃದ್ಧಿ ಕಾಮಗಾರಿಗಳಿಗೆ ಪಾರದರ್ಶಕವಾಗಿ, ನಿಯಮಿತವಾಗಿ ಮತ್ತು ಸುಲಭವಾಗಿ ಕಡಿಮೆ ದರದಲ್ಲಿ ಮರಳು ದೊರೆಯುವ ಸಲುವಾಗಿ ಉಲ್ಲೇಖ (1) ರಲ್ಲಿ ಹೊಸ ಮರಳು ನೀತಿ 2020 ನ್ನು ಜಾರಿಗೊಳಿಸಿದ್ದು, ಸದರಿ ಮರಳು ನೀತಿಯನ್ವಯ ಹಾಗೂ ಕರ್ನಾಟಕ ಉಪಖನಿಜ ರಿಯಾಯಿತಿ ನಿಯಮಾವಳಿ 1994 ರ ತಿದ್ದುಪಡಿ ನಿಯಮ 2021, 2023 & 2024 ರನ್ವಯ ಮೊದಲನೇ, ಎರಡನೇ ಮತ್ತು ಮೂರನೇ ಶ್ರೇಣಿಯ ಹಳ್ಳ/ ತೊರೆ ಮತ್ತು ಕೆರೆಗಳಲ್ಲಿ (I, II & III Order Streams) ಲಭ್ಯವಿರುವ ಮರಳನ್ನು ತೆರವುಗೊಳಿಸಲು ಸ್ಥಳಗಳನ್ನು ಗುರುತಿಸಿ ಕರ್ನಾಟಕ ರಾಜ್ಯ ಪತ್ರದಲ್ಲಿ ಅಧಿಸೂಚನೆ ಹೊರಡಿಸಿ ಮರಳು ತೆರವುಗೊಳಿಸಲು ಸಂಬಂಧಪಟ್ಟ ಗ್ರಾಮ ಪಂಚಾಯತಿಗೆ ಆಶಯ ಪತ್ರವನ್ನು ನೀಡಬೇಕಾಗಿರುತ್ತದೆ.

ಅದರಂತೆ ಉಡುಪಿ ಜಿಲ್ಲೆಯ ಮೊದಲನೇ, ಎರಡನೇ ಮತ್ತು ಮೂರನೇ ಶ್ರೇಣಿಯ (I, II & III Order Streams) ಹಳ್ಳ/ ತೊರೆ ಮತ್ತು ಕೆರೆಗಳಲ್ಲಿ ಮರಳು ತೆರವುಗೊಳಿಸಲು ಹೊಸದಾಗಿ ಗುರುತಿಸಿರುವ 02 ಮರಳು ನಿಕ್ಷೇಪಗಳನ್ನು ಕರ್ನಾಟಕ ರಾಜ್ಯ ಪತ್ರದಲ್ಲಿ ಅಧಿಸೂಚನೆ ಹೊರಡಿಸಲು ದಿನಾಂಕ: 19.01.2026 ರಂದು ನಡೆದ ತಾಲ್ಲೂಕು ಮರಳು ಉಸ್ತುವಾರಿ ಸಮಿತಿ ಸಭೆ ಹಾಗೂ ದಿನಾಂಕ: 06.02.2026 ರಂದು ಜರುಗಿದ ಜಿಲ್ಲಾ ಮರಳು ಉಸ್ತುವಾರಿ ಸಮಿತಿ ಸಭೆಯಲ್ಲಿ ನಿರ್ಣಯಿಸಲಾಗಿರುತ್ತದೆ. ಸದರಿ 02 ಮರಳು ನಿಕ್ಷೇಪಗಳ ವಿವರ ಈ ಕೆಳಕಂಡಂತಿದೆ.

ಕ್ರ. ಸಂ	ತಾಲ್ಲೂಕು	ಗ್ರಾಮ ಪಂಚಾಯತ್	ಗ್ರಾಮ	ಸ. ನಂ	ವಿಸ್ತೀರ್ಣ (ಎಕರೆ)	ಹಳ್ಳ/ ತೊರೆ	ಶ್ರೇಣಿ	ಅಕ್ಷಾಂಶ-ರೇಖಾಂಶ	ಪ್ರಮಾಣ (ಮೆ.ಟನ್)
1	ಕಾರ್ಕಳ	ಇನ್ನಾ	ಇನ್ನಾ	118	0.30	ದಾಸಕಟ್ಟ ಹಳ್ಳ	III	A.13° 7'49.77" 74°50'19.14" B. 13° 7'49.35" 74°50'18.12" C. 13° 7'48.76" 74°50'17.87" D. 13° 7'47.94" 74°50'18.29" E. 13° 7'46.46" 74°50'18.81" F. 13° 7'46.40" 74°50'18.51" G. 13° 7'47.65" 74°50'18.13"	1,044
2	ಕಾರ್ಕಳ	ಇನ್ನಾ	ಇನ್ನಾ	71	0.50	ದಾಸಕಟ್ಟ ಹಳ್ಳ	III	A. 13° 8'8.02" 74°50'44.49" B. 13° 8'7.84" 74°50'44.73" C. 13° 8'6.00" 74°50'44.09" D. 13° 8'5.19" 74°50'43.20" E. 13° 8'3.60" 74°50'42.68" F. 13° 8'1.31" 74°50'43.02" G. 13° 8'0.20" 74°50'42.61" H. 13° 8'0.32" 74°50'42.41" I. 13° 8'1.38" 74°50'42.76" J. 13° 8'3.57" 74°50'42.43" K. 13° 8'5.45" 74°50'43.02" L. 13° 8'6.36" 74°50'43.95"	1,738
ಒಟ್ಟು									2,782

(ಸ್ವರೂಪ ಟಿ.ಕೆ, ಭಾ.ಆ.ಸೇ)
ಜಿಲ್ಲಾಧಿಕಾರಿಗಳು ಹಾಗೂ ಅಧ್ಯಕ್ಷರು
ಜಿಲ್ಲಾ ಮರಳು ಉಸ್ತುವಾರಿ ಸಮಿತಿ
ಉಡುಪಿ ಜಿಲ್ಲೆ, ಉಡುಪಿ

PR-45

(ಕಂದಾಯ ಇಲಾಖೆ)

ಜಿಲ್ಲಾಧಿಕಾರಿಗಳು ಹಾಗೂ ಜಿಲ್ಲಾ ಚುನಾವಣಾಧಿಕಾರಿಗಳ ಕಾರ್ಯಾಲಯ ಮಂಡ್ಯ ಜಿಲ್ಲೆ, ಮಂಡ್ಯ

ದೂರವಾಣಿಸಂಖ್ಯೆ:08232-226074 -ಮೇಲ್:deo.mandya1@gmail.com

ಸಂಖ್ಯೆ:ಇಎಲ್ಎನ್(2)ಸಿ.ಆರ್.09/2025-26 ದಿನಾಂಕ:16-03-2026

:ಕರಡು ಅಧಿಸೂಚನೆ:

ಸರ್ಕಾರದ ಅಧಿಸೂಚನೆ. ಸಂಖ್ಯೆ: ನಅಇ76ಎಂ.ಎಲ್.ಆರ್.2025(ಇ) ದಿನಾಂಕ:07.08.2025 ರಲ್ಲಿ ಮಂಡ್ಯ ಜಿಲ್ಲೆಯ ಮದ್ದೂರು ಪುರಸಭೆಯನ್ನು ನಗರಸಭೆಯನ್ನಾಗಿಸಿ ಮೇಲ್ದರ್ಜೆಗೇರಿಸಿ ಉದ್ಘೋಷಿಸಿರುವ ಮೇರೆಗೆ, ಸರ್ಕಾರದ ಪತ್ರದ ಸಂಖ್ಯೆ: ನಅಇ 18 ಎಂಎಲ್ಆರ್-2026(ಇ) ದಿನಾಂಕ:10.02.2026 ರಲ್ಲಿ 2011ರ ಜನಗಣತಿಯನ್ನಾಧರಿಸಿ ಹೊಸದಾಗಿ ಮೇಲ್ದರ್ಜೆಗೇರಿಸಲಾದ ನಗರ ಸ್ಥಳೀಯ ಸಂಸ್ಥೆಗಳಿಗೆ ವಾರ್ಡ್‌ವಾರು ಕ್ಷೇತ್ರ ವಿಂಗಡಣೆ ಮಾಡುವಂತೆ ಸೂಚಿಸಲಾಗಿದೆ.

ಆದ್ದರಿಂದ ಕರ್ನಾಟಕ ಪುರಸಭೆಗಳ ಅಧಿನಿಯಮ 1964ರ ಸೆಕ್ಷನ್ 13 ಹಾಗೂ ಪ್ರಕರಣ 352(2) ಮತ್ತು ಸರ್ಕಾರದ ಆದೇಶ ಸಂಖ್ಯೆ:ಯುಡಿಡಿ 4 ಎಂಎಲ್ಆರ್ 2014 ದಿನಾಂಕ: 15.02.2014ರ ಮಾರ್ಗಸೂಚಿಯಂತೆ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ಮಂಡ್ಯ ಜಿಲ್ಲೆಯ ಜಿಲ್ಲಾಧಿಕಾರಿ ಡಾ.ಕುಮಾರ ಐ.ಎ.ಎಸ್., ಆದ ನಾನು ಮಂಡ್ಯ ಜಿಲ್ಲೆಯ ಮದ್ದೂರು ನಗರಸಭೆಯ ಕ್ಷೇತ್ರ ವಿಂಗಡಣೆ ಮಾಡಿ, ವಾರ್ಡ್‌ವಾರು ಪ್ರದೇಶ ವ್ಯಾಪ್ತಿಯನ್ನು ಈ ಕೆಳಕಂಡಂತೆ ನಿರ್ಧಿಷ್ಟಪಡಿಸಲು ಪ್ರಸ್ತಾಪಿಸಿ ಈ ಕರಡು ಅಧಿಸೂಚನೆಯನ್ನು ಹೊರಡಿಸಿರುತ್ತೇನೆ.

ಇದರಿಂದ ಬಾಧಿತರಾಗಬಹುದಾದ ಎಲ್ಲಾ ವ್ಯಕ್ತಿಗಳು ದಿನಾಂಕ:30.03.2026 ರೊಳಗಾಗಿ ಲಿಖಿತ ಆಕ್ಷೇಪಣೆ/ ಸಲಹೆಗಳನ್ನು ಸಕಾರಣಗಳೊಂದಿಗೆ ಜಿಲ್ಲಾಧಿಕಾರಿ ಮಂಡ್ಯ ಜಿಲ್ಲೆ, ಮಂಡ್ಯ ರವರಿಗೆ ಸಲ್ಲಿಬಹುದಾಗಿದೆ.

1.ಮದ್ದೂರು ನಗರಸಭೆ ವಾರ್ಡ್‌ಗಳ ಸಂಖ್ಯೆ: **31**
2.ಮೇಲ್ಕಾಣಿಸಿದ ವಾರ್ಡ್‌ಗಳ ವ್ಯಾಪ್ತಿಯನ್ನು ಅನುಬಂಧದ ಅಂಕಣ(3)ರಲ್ಲಿ ನಮೂದಿಸಲಾಗಿದೆ.
3.ಪ್ರತಿ ಪ್ರಾದೇಶಿಕ ವಾರ್ಡ್‌ನ ಸದಸ್ಯ ಸ್ಥಾನ ತಲಾ ಒಂದರಂತೆ ಇರುತ್ತದೆ.

ಅನುಬಂಧ

ಕ್ರಸಂ	**ವಾರ್ಡ್‌ನ ಸಂಖ್ಯೆ ಮತ್ತು ಹೆಸರು**	**ವಾರ್ಡ್ ಪ್ರದೇಶ ವ್ಯಾಪ್ತಿ**
1	**2**	3
01	01-ಮದ್ದೂರು ನಗರಸಭೆ	ರುದ್ರಾಕ್ಷಿಪುರ ಗ್ರಾಮದ ಸರ್ವೆ ನಂ-86 ನಿಡಘಟ್ಟ ಗಡಿಯಿಂದ ಪ್ರಾರಂಭವಾಗಿ ಪಶ್ಚಿಮಾಭಿಮುಖವಾಗಿ ಡಣಾಯಕನದೊಡ್ಡಿ ಗಡಿ ಮಾರ್ಗವಾಗಿ ಸರ್ವೆ ನಂ-97ರ ಹತ್ತಿರ ದಕ್ಷಿಣಕ್ಕೆ ತಿರುಗಿ ಪಶ್ಚಿಮಾಭಿಮುಖವಾಗಿ ಸಾಗಿ ಸರ್ವೆ ನಂ-01ರ ಹತ್ತಿರ ದಕ್ಷಿಣಾಭಿಮುಖವಾಗಿ ಸೋಮನಹಳ್ಳಿ ಗಡಿ ಮೂಲಕ ಹಳೇ ಎಂ.ಸಿ ರಸ್ತೆ ತಲುಪಿ ಕೆಫೆ ಕಾಫಿ ಡೇ ಮೂಲಕ ಶಿಂಷಾ ನಗರ ಬಡಾವಣೆ ಪಕ್ಕದ ಕೆ. ಕೋಡಿಹಳ್ಳಿ ರಸ್ತೆ ಹತ್ತಿರ ಪಶ್ಚಿಮಕ್ಕೆ ತಿರುಗಿ ಸರ್ವೆ ನಂ-13ರ ಹತ್ತಿರ ದಕ್ಷಿಣಾಭಿಮುಖವಾಗಿ ಕೆ.ಕೋಡಿಹಳ್ಳಿ ಗಡಿ ಮೂಲಕ ಅಗರಲಿಂಗನದೊಡ್ಡಿ ಕಾಲುವೆ ತಲುಪಿ ಸರ್ವೆ ನಂ-16ರ ಹತ್ತಿರ ಪೂರ್ವದ ಕಡೆಗೆ ಚಲಿಸಿ ತೈಲೂರು ಮತ್ತು ಮಾದನಾಯಕನಹಳ್ಳಿ ಮೂಲಕ ಸಾಗಿ ಸರ್ವೆ ನಂ-103ರ ಹತ್ತಿರ ನಿಡಘಟ್ಟ ಗಡಿ ತಲುಪಿ ಉತ್ತರ ದಿಕ್ಕಿಗೆ ನಿಡಘಟ್ಟ ಗಡಿ ಮೂಲಕ ಸಾಗಿ ರುದ್ರಾಕ್ಷಿಪುರ ಕೆರೆ ಮೂಲಕ ಹಾದು ಹಳೆ ಎಂ.ಸಿ ರಸ್ತೆ ತಲುಪಿ ಸರ್ವೆ ನಂ-86ನ್ನು ತಲುಪುವುದು. **ಚಕ್ಕುಬಂದಿ** ಪೂರ್ವ:ನಿಡಘಟ್ಟ ಗಡಿ ಪಶ್ಚಿಮ: ಸೋಮನಹಳ್ಳಿ ಮತ್ತು ಕೆ. ಕೋಡಿಹಳ್ಳಿ ಗಡಿ ಉತ್ತರ: ಡಣಾಯಕನದೊಡ್ಡಿ ಗಡಿ ದಕ್ಷಿಣ: ತೈಲೂರು ಮತ್ತು ಮಾದನಾಯಕನಹಳ್ಳಿ ಗಡಿ.

02	02-ಮದ್ದೂರು ನಗರಸಭೆ	ಸೋಮನಹಳ್ಳಿ ಸರ್ವೆ ನಂ-32ರಿಂದ ಪ್ರಾರಂಭವಾಗಿ ಡಣಾಯಕನದೊಡ್ಡಿ ಗಡಿ ಮೂಲಕ ಪಶ್ಚಿಮಾಭಿಮುಖವಾಗಿ ಸಾಗಿ ಸರ್ವೆ ನಂ-29ರ ಹತ್ತಿರ ಉತ್ತರ ದಿಕ್ಕಿಗೆ ಚಲಿಸಿ ಸರ್ವೆ ನಂ-28ರ ಹತ್ತಿರ ಕದಲೂರು ಗಡಿ ತಲುಪಿ ಪಶ್ಚಿಮಾಭಿಮುಖವಾಗಿ ಸಾಗಿ ಕದಲೂರು ರಸ್ತೆ ಸರ್ವೆ ನಂ-20ರ ಹತ್ತಿರ ದಕ್ಷಿಣಕ್ಕೆ ಚಲಿಸಿ ಸಿದ್ದಾರೂಢ ಕಾನ್ವೆಂಟ್ ಮೂಲಕ ಕಾಲುವೆ ತಲುಪಿ ಶಶಿಕಾಂತ್ ರವರ ಇಟ್ಟಿಗೆ ಫ್ಯಾಕ್ಟರಿ ಮೂಲಕ ದಕ್ಷಿಣ ದಿಕ್ಕಿಗೆ ಸಾಗಿ ರಾಜಬೀದಿ ತಲುಪಿ ಹಳೇ ಪಾಠ ಶಾಲೆ ರಸ್ತೆಮೂಲಕಪೂರ್ವದ ದಿಕ್ಕಿನ ಮನೆಗಳನ್ನು ಸೇರಿಕೊಂಡಂತೆ ದಕ್ಷಿಣ ದಿಕ್ಕಿನ ಬಿ.ಎಂ ರಸ್ತೆ ತಲುಪಿ ಇಲ್ಲಿಂದ ಪೂರ್ವದ ಕಡೆ ಬಿ.ಎಂ ರಸ್ತೆ ಮೂಲಕ ಸಾಗಿ ರುದ್ರಾಕ್ಷಿಪುರ ಗಡಿ ಸರ್ವೆ ನಂ-36ನ್ನು ತಲುಪಿ ಇಲ್ಲಿಂದ ಉತ್ತರ ದಿಕ್ಕಿಗೆ ತಿರುಗಿ ರುದ್ರಾಕ್ಷಿಪುರ ಗಡಿ ಮೂಲಕ ಸರ್ವೆ ನಂ-32ನ್ನು ತಲುಪುವುದು. **ಚಕ್ಕುಬಂದಿ** ಪೂರ್ವ:ರುದ್ರಾಕ್ಷಿಪುರ ಗಡಿ ಪಶ್ಚಿಮ: ಸೋಮನಹಳ್ಳಿ ಉತ್ತರ: ಕದಲೂರು ಮತ್ತು ಡಣಾಯಕನದೊಡ್ಡಿ ಗಡಿ ದಕ್ಷಿಣ : ಬೆಂಗಳೂರು-ಮೈಸೂರು ಹೆದ್ದಾರಿ.
03	03-ಮದ್ದೂರು ನಗರಸಭೆ	ಸೋಮನಹಳ್ಳಿ ಸರ್ವೆ ನಂ-39ರ ರುದ್ರಾಕ್ಷಿಪುರ ಗಡಿಯಿಂದ ಪ್ರಾರಂಭವಾಗಿ ಪಶ್ಚಿಮದ ಕಡೆ ಬೆಂಗಳೂರು-ಮೈಸೂರು ರಸ್ತೆ ಮಾರ್ಗವಾಗಿ ಸಾಗಿ ಸೋಮನಹಳ್ಳಿ ಹಳೇ ಪಾಠಶಾಲ ರಸ್ತೆಯ ಮೂಲಕ ಉತ್ತರಕ್ಕೆ ತಿರುಗಿ ರಾಜಬೀದಿ ತಲುಪಿ ಉತ್ತರದ ಕಡೆ ಸರ್ವೆ ನಂ-20ನ್ನು ತಲುಪಿ ರೈಲ್ವೆ ಟ್ರ್ಯಾಕ್ ಮೂಲಕ ಸ್ಕಂದ ಬಡಾವಣೆ ತಲುಪಿ ಹೆಮ್ಮನಹಳ್ಳಿ ಗಡಿ ಮಾರ್ಗವಾಗಿ ಪಶ್ಚಿಮ ದಿಕ್ಕಿಗೆ ಸಾಗಿ ಸರ್ವೆ ನಂ-179ರ ಹತ್ತಿರ ತುಮಕೂರು ರಸ್ತೆ ಮೂಲಕ ದಕ್ಷಿಣಾಭಿಮುಖವಾಗಿ ಅಡಿಗಾಸ್ ಹೋಟೆಲ್ ಸರ್ಕಲ್ ತಲುಪಿ ಇಲ್ಲಿಂದ ಪಶ್ಚಿಮಕ್ಕೆ ತಿರುಗಿ ತಿಮ್ಮದಾಸ್ ಹೋಟೆಲ್ ಮಾರ್ಗವಾಗಿ ಶಿಂಷಾ ನದಿ ತಲುಪಿ ದಕ್ಷಿಣ ದಿಕ್ಕಿಗೆ ತಲುಪಿ ಕೆ.ಕೋಡಿಹಳ್ಳಿ ಗ್ರಾಮದ ಗಡಿ ಸರ್ವೆ ನಂ-126ರ ಹತ್ತಿರ ಪೂರ್ವ ದಿಕ್ಕಿಗೆ ತಿರುಗಿ ದಕ್ಷಿಣಾಭಿಮುಖವಾಗಿ ಕೆ.ಕೋಡಿಹಳ್ಳಿ ಹೊಳೆ ರಸ್ತೆ ತಲುಪಿ ಮುಂದೆ ಪೂರ್ವಾಭಿಮುಖವಾಗಿ ಸಾಗಿ ಸರ್ವೆ ನಂ-42ರ ಹತ್ತಿರ ರುದ್ರಾಕ್ಷಿಪುರ ಗಡಿ ಮೂಲಕ ಉತ್ತರ ದಿಕ್ಕಿಗೆ ಸಾಗಿ ಕೆಫೆ ಕಾಫಿ ಡೇ ಮೂಲಕ ಬಿ.ಎಂ ರಸ್ತೆ ಸರ್ವೆ ನಂ-39ನ್ನು ತಲುಪುವುದು. **ಚಕ್ಕುಬಂದಿ** ಪೂರ್ವ: ರುದ್ರಾಕ್ಷಿಪುರ ಗಡಿ ಮತ್ತು ಸೋಮನಹಳ್ಳಿ. ಪಶ್ಚಿಮ: ಶಿಂಷಾ ನದಿ ಹುಳಗನಹಳ್ಳಿ ಮತ್ತು ಹೆಮ್ಮನಹಳ್ಳಿ ಗಡಿ ಉತ್ತರ: ಹೆಮ್ಮನಹಳ್ಳಿ ಗಡಿ ದಕ್ಷಿಣ:ಕೆ.ಕೋಡಿಹಳ್ಳಿ ಗಡಿ
೦4	04-ಮದ್ದೂರು ನಗರಸಭೆ	ಅಗರಲಿಂಗನದೊಡ್ಡಿ ಸರ್ವೆನಂ-01ರಿಂದ ಉತ್ತರಾಭಿಮುಖವಾಗಿ ಸರ್ವೆ ನಂ-14ರ ಹತ್ತಿರ ಪಶ್ಚಿಮಕ್ಕೆ ತಿರುಗಿ ಇದೇ ಸರ್ವೆ ನಂ ಮೂಲಕ ರುದ್ರಾಕ್ಷಿಪುರ ಗಡಿ ಮಾರ್ಗವಾಗಿ ಉತ್ತರಾಭಿಮುಖವಾಗಿ ಸಾಗಿ ಸರ್ವೆ ನಂ-17ರ ಹತ್ತಿರ ಸೋಮನಹಳ್ಳಿ ಗಡಿ ಮಾರ್ಗವಾಗಿ ಪಶ್ಚಿಮಾಭಿಮುಖವಾಗಿ ಸಾಗಿ ಸೋಮನಹಳ್ಳಿ ಕೆ.ಕೋಡಿಹಳ್ಳಿ ರಸ್ತೆಯ ಮೂಲಕ ಹಾದು ಸರ್ವೆ ನಂ-27ರ ಹತ್ತಿರ ಉತ್ತರ ದಿಕ್ಕಿಗೆ ಸಾಗಿ ಸರ್ವೆ ನಂ-30ರ ಹತ್ತಿರ ಪಶ್ಚಿಮಾಭಿಮುಖವಾಗಿ ಶಿಂಷಾ ನದಿ ತಲುಪಿ ದಕ್ಷಿಣ ದಿಕ್ಕಿಗೆ ಸಾಗಿ ಶಿಂಷಾ ನದಿ ಮೂಲಕ ಅಗರಲಿಂಗನದೊಡ್ಡಿ ಗಡಿ ಸರ್ವೆ ನಂ-36ರ ಮೂಲಕ ಹಾಗೂ ದಕ್ಷಿಣಾಭಿಮುಖವಾಗಿ ತೈಲೂರು ಗಡಿ ತಲುಪಿ ಪೂರ್ವದ ಕಡೆಗೆ ಸಾಗಿ ಸರ್ವೆ ನಂ-27ರ ಹತ್ತಿರ ಉತ್ತರ ದಿಕ್ಕಿಗೆ ಸಾಗಿ ಸರ್ವೆ ನಂ-19ನ್ನು ತಲುಪಿ ಮತ್ತೆ ಪೂರ್ವಾಭಿಮುಖವಾಗಿ ಸಾಗಿ ತೈಲೂರು ಗಡಿ ಮೂಲಕ ಅಗರಲಿಂಗನದೊಡ್ಡಿ ದೋಣಿ ಕಾಲುವೆ ಮೂಲಕ ಹಳ್ಳದ ಹತ್ತಿರ ಉತ್ತರ ದಿಕ್ಕಿಗೆ ಸಾಗಿ ಸರ್ವೆ ನಂ-01ನ್ನು ತಲುಪುವುದು. **ಚಕ್ಕುಬಂದಿ** ಪೂರ್ವ: ತೈಲೂರು ಮತ್ತು ರುದ್ರಾಕ್ಷಿಪುರ ಗ್ರಾಮದ ಗಡಿ. ಪಶ್ಚಿಮ:ಶಿಂಷಾನದಿ, ಉತ್ತರ:ಸೋಮನಹಳ್ಳಿ ಸರ್ವೆ ನಂ. ಗಡಿ ದಕ್ಷಿಣ: ತೈಲೂರು ಗಡಿ.

05	05-ಮದ್ದೂರು ನಗರಸಭೆ	ಚಾಮನಹಳ್ಳಿ ಗ್ರಾಮದ ಸರ್ವೆ ನಂಬರ್ 13 ರಿಂದ ಪ್ರಾರಂಭವಾಗಿ ದೇಶಹಳ್ಳಿ ಗಡಿ ದಕ್ಷಿಣಾಭಿಮುಖವಾಗಿ ಚಲಿಸಿ ಸರ್ವೆ ನಂಬರ್ 511 ತಲುಪಿ ಪಶ್ಚಿಮಾಭಿಮುಖವಾಗಿ ಸರ್ವೆ ನಂಬರ್ 486 ತಲುಪಿ ಮದ್ದೂರು ಗಡಿ ಮುಖಾಂತರ ದಕ್ಷಿಣಾಭಿಮುಖವಾಗಿ ಚಲಿಸಿ ಸರ್ವೆ ನಂಬರ್ 481 ತಲುಪಿ ಪೂರ್ವಾಭಿಮುಖವಾಗಿ ಆಶ್ರಯ ಬಡಾವಣೆ ಒಳಗೊಂಡಂತೆ ಮದ್ದೂರು ಗಡಿ ಮುಖಾಂತರ ಚಲಿಸಿ ರೈಲ್ವೆ ಟ್ರ್ಯಾ ತಲುಪಿ ಉತ್ತರಾಭಿಮುಖವಾಗಿ ಸರ್ವೆ ನಂಬರ್ 439 ತಲುಪಿ ಪಶ್ಚಿಮಾಭಿಮುಖವಾಗಿ ಶಿವಪುರ ಗ್ರಾಮದ ಗಡಿ ಮುಖಾಂತರ ಉತ್ತರಾಭಿಮುಖವಾಗಿ ಸರ್ವೆ ನಂಬರ್ 543 ತಲುಪಿ ಪಶ್ಚಿಮಾಭಿಮುಖವಾಗಿ ಸರ್ವೆ ನಂಬರ್ 13 ತಲುಪುವುದು **<u>ಚಕ್ಕುಬಂದಿ</u>** ಪೂರ್ವ :ರೈಲ್ವೆಟ್ರ್ಯಾಕ್ ಶಿವಪುರ ಗಡಿ ಪಶ್ಚಿಮ: ದೇಶಹಳ್ಳಿಗಡಿ ಮತ್ತು ಮದ್ದೂರು ಗಡಿ ಉತ್ತರ : ಚಾಮನಹಳ್ಳಿ ದಕ್ಷಿಣ :ಮದ್ದೂರು ಗಡಿ
06	06-ಮದ್ದೂರು ನಗರಸಭೆ	ಚಾಮನಹಳ್ಳಿ ಗ್ರಾಮದ ಶಿಂಷಾ ನದಿ ಪಕ್ಕದ ಸರ್ವೆ ನಂಬರ್ 291 ರಿಂದ ಪ್ರಾರಂಭವಾಗಿ ಶಿಂಷಾನದಿ ಗಡಿ ಮೂಲಕ ಚಲಿಸಿ ಉತ್ತರದ ಕೊತ್ತನಹಳ್ಳಿ ಗಡಿ ಸರ್ವೆ ನಂಬರ್ 680 ತಲುಪಿ ಹಾಗೆ ಪಶ್ಚಿಮ ದಿಕ್ಕಿಗೆ ಕೊತ್ತನಹಳ್ಳಿ ಗಡಿ ಮೂಲಕ ಸಾಗಿ ಸರ್ವೆ ನಂಬರ್ 136ರ ಹತ್ತಿರದಿಂದ ದಕ್ಷಿಣಾಭಿಮುಖವಾಗಿ ಚಲಿಸಿ ಸರ್ವೆ ನಂಬರ್ 15 ತಲುಪಿ ಮತ್ತೆ ಪೂರ್ವಾಭಿಮುಖವಾಗಿ ಸರ್ವೆ ನಂಬರ್ 567 ಮುಖಾಂತರ ಚಲಿಸಿ ಸರ್ವೆ ನಂಬರ್ 319 ರಗಡಿ ತಲುಪಿ ಉತ್ತರಾಭಿಮುಖವಾಗಿ ಚಲಿಸಿ ಸರ್ವೆ ನಂಬರ್ 291 ತಲುಪುವುದು **<u>ಚಕ್ಕುಬಂದಿ</u>** ಪೂರ್ವ :ಶಿವಪುರ ಗಡಿ ಮತ್ತು ಶಿಂಷಾನದಿ ಪಶ್ಚಿಮ :ಚಾಮನಹಳ್ಳಿ ಗಡಿ ಉತ್ತರ : ಕೊತ್ತನಹಳ್ಳಿ ಗಡಿ ದಕ್ಷಿಣ : ಚಾಮನಹಳ್ಳಿ ಮತ್ತು ಶಿವಪುರ ಗಡಿ
07	07-ಮದ್ದೂರು ನಗರಸಭೆ	ಚಾಮನಹಳ್ಳಿ (ಚಾಪುರದೊಡ್ಡಿ) ಸರ್ವೆ ನಂಬರ್ 103 ಕೊತ್ತನಹಳ್ಳಿ ಗಡಿ ಮೂಲಕ ಪ್ರಾರಂಭವಾಗಿ ಪಶ್ಚಿಮಾಭಿಮುಖವಾಗಿ ಕೊತ್ತನಹಳ್ಳಿ ಗಡಿ ಮುಖಾಂತರ ಚಲಿಸಿ ಶಂಕರಪುರ ಗ್ರಾಮದ ಗಡಿ ಸರ್ವೆ ನಂಬರ್ 64 ತಲುಪಿ ಚಾಪುರದೊಡ್ಡಿ ಗ್ರಾಮ ಒಳಗೊಂಡಂತೆ ದಕ್ಷಿಣಾಭಿಮುಖವಾಗಿ ಶಂಕರಪುರ ಗಡಿ ಮುಖಾಂತರ ಸರ್ವೆ ನಂಬರ್ 56 ತಲುಪಿ ಹಾಗೆ ಪೂರ್ವಾಭಿಮುಖವಾಗಿ ದೇಶಹಳ್ಳಿ ಗಡಿ ಮುಖಾಂತರ ಎಸ್ ಸಿ ಮಲ್ಲಯ್ಯ ಬಡಾವಣೆ ಒಳಗೊಂಡಂತೆ ಸರ್ವೆ ನಂಬರ್ 31 ಅನ್ನು ತಲುಪಿ, ಉತ್ತಾರಾಭಿಮುಖವಾಗಿ ಚಿಕ್ಕಕೆರೆ ಮೂಲಕ ಸರ್ವೆ ನಂ:-103 ಕೊತ್ತನಹಳ್ಳಿ ಗಡಿ ತಲುಪುವುದು. **<u>ಚಕ್ಕುಬಂದಿ</u>** ಪೂರ್ವ : ಚಾಮನಹಳ್ಳಿ ಪಶ್ಚಿಮ: ಶಂಕರಪುರ ಗಡಿ ಉತ್ತರ : ಕೊತ್ತನಹಳ್ಳಿ ಗಡಿ ದಕ್ಷಿಣ : ದೇಶಹಳ್ಳಿ ಗಡಿ
08	08-ಮದ್ದೂರು ನಗರಸಭೆ	ದೇಶಹಳ್ಳಿ ಗ್ರಾಮದ ಚಾಮನಹಳ್ಳಿ ಗಡಿ ಸರ್ವೆ ನಂಬರ್ 110 ಕೊಪ್ಪ ರಸ್ತೆ ಪಶ್ಚಿಮಾಭಿಮುಖವಾಗಿ ಚಲಿಸಿ ವಳಗೆರೆಹಳ್ಳಿ ಗಡಿ ಸರ್ವೆ ನಂಬರ್ 132 ತಲುಪಿ ದಕ್ಷಿಣಾಭಿಮುಖವಾಗಿ ದೇಶಹಳ್ಳಿ ಕೆರೆ ಮತ್ತು ಮದ್ದೂರು ಕೆರೆ ಮುಖಾಂತರ ಪೂರ್ವದ ಕಡೆ ಸರ್ವೆ ನಂಬರ್ 11 ರ ಹತ್ತಿರ ದಕ್ಷಿಣಾಭಿಮುಖವಾಗಿ ಚಲಿಸಿ ಸರ್ವೆ ನಂಬರ್ 17 ರ ಮೂಲಕ ಪೂರ್ವಾಭಿಮುಖವಾಗಿ ಮದ್ದೂರು ಗಡಿ ಮತ್ತು ಚಾಮನಹಳ್ಳಿ ಗಡಿ ಮುಖಾಂತರ ಸರ್ವೆ ನಂಬರ್ 76 ತಲುಪಿ ಮತ್ತೆ ಉತ್ತರಾಭಿಮುಖವಾಗಿ ದೇಶಹಳ್ಳಿ ಗ್ರಾಮ ಮತ್ತು ಸೌಪರ್ಣಿಕ ರೆಸಿಡೆನ್ಸಿ ಒಳಗೊಂಡಂತೆ ಚಾಮನಹಳ್ಳಿ ಗ್ರಾಮದ ಗಡಿ ಮುಖಾಂತರ ಸರ್ವೆ ನಂಬರ್ 110 ತಲುಪುವುದು. **<u>ಚಕ್ಕುಬಂದಿ</u>** ಪೂರ್ವ: ಚಾಮನಹಳ್ಳಿ ಗಡಿ ಪಶ್ಚಿಮ: ವಳಗೆರೆಹಳ್ಳಿ ಗಡಿ ಉತ್ತರ: ಚಾಮನಹಳ್ಳಿ ಗಡಿ ದಕ್ಷಿಣ: ಮದ್ದೂರು ಗಡಿ

09	09-ಮದ್ದೂರು ನಗರಸಭೆ	ಸರ್ವೆ ನಂಬರ್ :-656 ಶಿಂಷಾ ನದಿಯಿಂದ ಪ್ರಾರಂಭಗೊಂಡು ದಕ್ಷಿಣಾಭಿಮುಖವಾಗಿ ಚಲಿಸಿ ಸರ್ವೆ ನಂಬರ್ 376 ತಲುಪಿ, ಪಶ್ಚಿಮಾಭಿಮುಖವಾಗಿ ಚಲಿಸಿ ಬಲಭಾಗ ಸೇರಿದಂತೆ ನೈದಿಲೆ ರೆಸಿಡೆನ್ಸಿ ತಲುಪಿ, ಬೆಂಗಳೂರು-ಮೈಸೂರು ರಸ್ತೆ ದಾಟಿ ಉತ್ತಾರಾಭಿಮುಖವಾಗಿ ಚಲಿಸಿ ಶಿವಪುರ ಗ್ರಾಮದ ಮಾಸ್ತಮ್ಮ ದೇವಸ್ಥಾನದಬೀದಿ ತಲುಪಿ, ಕುಂಬಾರರ ಬೀದಿ ಮುಖಾಂತರ ದಕ್ಷಿಣಾಭಿಮುಖವಾಗಿ ಚಲಿಸಿ, ಎ.ಬಿ.ರೇವಣ್ಣನವರ ಮನೆ ಮುಂಭಾಗದ ರಸ್ತೆ ಸೇರಿದಂತೆ ಪಶ್ಚಿಮಾಭಿಮುಖವಾಗಿ ಚಲಿಸಿ, ಹಳೇ ಕೊಪ್ಪ ರಸ್ತೆ ಅರಳಿಮರದ ಹತ್ತಿರ ಪಶ್ಚಿಮಾಭಿಮುಖವಾಗಿ, ರೈಲ್ವೆ ಟ್ರ್ಯಾಕ್ ತಲುಪಿ, ಚಾಮನಹಳ್ಳಿ ಗಡಿ ತಲುಪಿ, ಬಲಭಾಗ ಸೇರಿದಂತೆ ರೈಲ್ವೆ ಟ್ರ್ಯಾಕ್ ಮುಖಾಂತರ ಉತ್ತಾರಾಭಿಮುಖವಾಗಿ ಚಲಿಸಿ ನಂತರ ಪೂರ್ವಾಭಿಮುಖವಾಗಿ ಚಲಿಸಿ ಸರ್ವೆ ನಂಬರ್ 656 ರಲ್ಲಿ ಕೊನೆಗೊಳ್ಳುವುದು. **ಚಕ್ಕುಬಂದಿ** ಪೂರ್ವ : ಶಿಂಷಾನದಿ ಪಶ್ಚಿಮ: ರೈಲ್ವೆಸ್ಟೇಷನ್ ಮತ್ತು ಚಾಮನಹಳ್ಳಿಗಡಿ ಉತ್ತರ: ರೈಲ್ವೆಹಳಿ ದಕ್ಷಿಣ :ಎ.ಬಿ.ರೇವಣ್ಣರವರಮನೆ ಮತ್ತು ಹಳೇ ಕೊಪ್ಪ ರಸ್ತೆ.
10	10-ಮದ್ದೂರು ನಗರಸಭೆ	ಸರ್ವೆ ನಂಬರ್ 378 ಶಿಂಷಾ ನದಿಯಿಂದ ಪ್ರಾರಂಭಗೊಂಡು ದಕ್ಷಿಣಾಭಿಮುಖವಾಗಿ ಚಲಿಸಿ ಕೊಲ್ಲಿ ಪಕ್ಕದ ಸರ್ವೆ ನಂಬರ್ 311ರ ಕೊಲ್ಲಿ ಹಳ್ಳದ ಮುಖಾಂತರ ಪಶ್ಚಿಮಾಭಿಮುಖವಾಗಿ ಬೆಂಗಳೂರು-ಮೈಸೂರು ರಸ್ತೆ ದಾಟಿ ಕೊಲ್ಲಿ ಹಳ್ಳದ ಮುಖಾಂತರ ರೈಲ್ವೆ ಟ್ರ್ಯಾಕ್ ತಲುಪುವುದು ಉತ್ತಾರಾಭಿಮುಖವಾಗಿ ಚಲಿಸಿ ಹಳೇ ಕೊಪ್ಪ ರಸ್ತೆ ತಲುಪಿ ಭಾರತ್ ಗ್ಯಾಸ್ ಗೋಡಾನ್ ಸೇರಿದಂತೆ ಪೂರ್ವಾಭಿಮುಖವಾಗಿ ಚಲಿಸಿ ಅರಳಿಮರ ತಲುಪಿ ಉತ್ತಾರಭಿಮುಖವಾಗಿ ಚಲಿಸಿ, ಎ.ಬಿ.ರೇವಣ್ಣನವರ ಮನೆ ಮುಖಾಂತರ ಪೂರ್ವಕ್ಕೆ ತಲುಪಿ, ಉತ್ತಾರಾಭಿಮುಖವಾಗಿ ಚಲಿಸಿ ಮಾಸ್ತಮ್ಮ ದೇವಸ್ಥಾನದ ಬೀದಿ, ಬಲಭಾಗ ಸೇರಿದಂತೆ ಬೆಂಗಳೂರು-ಮೈಸೂರು ರಸ್ತೆ ದಾಟಿ ಅಣ್ಣೇಗೌಡರ ಬಿಲ್ಡಿಂಗ್ ಸೇರಿದಂತೆ ಪೂರ್ವಾಭಿಮುಖವಾಗಿ ಸರ್ವೇ ನಂಬರ್ 378 ಶಿಂಷಾನದಿ ತಲುಪುವುದು. **ಚಕ್ಕುಬಂದಿ** ಪೂರ್ವ : ಶಿಂಷಾನದಿ ಪಶ್ಚಿಮ : ರೈಲ್ವೆಅಳಿ ಉತ್ತರ : ಹಳೇ ಕೊಪ್ಪ ರಸ್ತೆ ಮತ್ತು ಎ.ಬಿ.ರೇವಣ್ಣನವರಮನೆ ರಸ್ತೆ ದಕ್ಷಿಣ : ಕೊಲ್ಲಿಹಳ್ಳ
11	11-ಮದ್ದೂರು ನಗರಸಭೆ	ಸರ್ವೆ ನಂ-273 ಕೊಲ್ಲಿ ಸರ್ಕಲ್ ನಿಂದ ದಕ್ಷಿಣಾಭಿಮುಖವಾಗಿ ಹಳೇ ಎಂ.ಸಿ ರಸ್ತೆ ಮುಖಾಂತರ ಸಾಗಿ ಕುವೆಂಪು ವೃತ್ತ ತಲುಪಿ ಪಶ್ಚಿಮಾಭಿಮುಖವಾಗಿ ಚಲಿಸಿ ಕೋಟೆ ಬೀದಿ ಮುಖಾಂತರ ರಾಘವೇಂದ್ರ ಮಠದ ರಸ್ತೆ ಮೂಲಕ ಕೆಮ್ಮಣ್ಣು ನಾಲೆ ತಲುಪಿ ಉತ್ತರಾಭಿಮುಖವಾಗಿ ಚಲಿಸಿ ಬೆಂಗಳೂರು ಮೈಸೂರು ರಸ್ತೆ ತಲುಪಿ ಪಶ್ಚಿಮಾಭಿಮುಖವಾಗಿ ಚಲಿಸಿ ಕೆ.ಎಸ್.ಆರ್.ಟಿ.ಸಿ ಡಿಪೋ ರಸ್ತೆ ಮುಖಾಂತರ ರೈಲ್ವೆ ಗೇಟ್ ತಲುಪಿ ಉತ್ತರಾಭಿಮುಖವಾಗಿ ಚಲಿಸಿ ಕೊಲ್ಲಿ ಹಳ್ಳ ತಲುಪಿ ಸರ್ವೆ ನಂ 283 ಸಾಗಿ ಕೊಲ್ಲಿ ಹಳ್ಳದ ಮುಖಾಂತರ ಬೆಂಗಳೂರು ಮೈಸೂರು ರಸ್ತೆ ಪಕ್ಕದ ಸರ್ವೆ ನಂ 273ನ್ನು ಸೇರಿಕೊಳ್ಳುವುದು. **ಚಕ್ಕುಬಂದಿ** ಪೂರ್ವ :ಜನರಲ್ ಕಾರ್ಯಪ್ಪರಸ್ತೆ ಮತ್ತು ಸರ್ವೆ ನಂ 273 ಪಶ್ಚಿಮ : ಕೆಮ್ಮಣ್ಣುನಾಲೆ ಉತ್ತರ : ಕೊಲ್ಲಿಹಳ್ಳ ದಕ್ಷಿಣ : ರಾಘವೇಂದ್ರ ಮಠದ ರಸ್ತೆ
12	12-ಮದ್ದೂರು ನಗರಸಭೆ	ಬೆಂಗಳೂರು-ಮೈಸೂರು ರಸ್ತೆ ಮಲ್ಲಿಕಾರ್ಜುನರವರ ಬಿಲ್ಡಿಂಗ್ ಮುಖಾಂತರ ಶಿಂಷಾ ಹೊಳೆ ಬಲಭಾಗದ ಸರ್ವೇನಂಬರ್ ಸೇರಿಕೊಂಡಂತೆ ಹೊಳೆಆಂಜನೇಯ ಸ್ವಾಮಿ ದೇವಸ್ಥಾನ ಮತ್ತು ಎಸ್.ಟಿ.ಪಿ. ಸೇರಿಕೊಂಡಂತೆ ಪಶ್ಚಿಮಾಭಿಮುಖವಾಗಿ ಚಲಿಸಿ ದಂಡಿನಮಾರಮ್ಮನ ದೇವಸ್ಥಾನ ತಲುಪಿ ಕಾಲುವೆ ಮುಖಾಂತರ ಬಲಭಾಗಕ್ಕೆ ತಿರುಗಿ ಪಶ್ಚಿಮಾಭಿಮುಖವಾಗಿ ಹಳೇ ಮಸೀದಿ ತಲುಪಿ ಹೊಳೆಬೀದಿ ಮುಖಾಂತರ ಹಳೇ ಎಂ.ಸಿ. ರಸ್ತೆ ತಲುಪುವುದು. **ಚಕ್ಕುಬಂದಿ** ಪೂರ್ವ :ಶಿಂಷಾನದಿ ಪಶ್ಚಿಮ : ಹಳೇಎಂ.ಸಿ.ರಸ್ತೆ ಉತ್ತರ : ಬೆಂಗಳೂರು-ಮೈಸೂರುರಸ್ತೆ ದಕ್ಷಿಣ : ಹಳೇಮಸೀದಿ

13	13-ಮದ್ದೂರು ನಗರಸಭೆ	ದಂಡಿನ ಮಾರಮ್ಮ ದೇವಸ್ಥಾನದಿಂದ ಪ್ರಾರಂಭಗೊಂಡು ದಕ್ಷಿಣಾಭಿಮುಖವಾಗಿ ಸರ್ವೇ ನಂಬರ್ ಸೇರಿಕೊಂಡಂತೆ ಪಶ್ಚಿಮಾಭಿಮುಖವಾಗಿ ಚಲಿಸಿ ಹಳೇ ವೈದ್ಯನಾಥಪುರ ರಸ್ತೆ ಮುಖಾಂತರ ಉತ್ತರಕ್ಕೆ ಚಲಿಸಿ ಹಳೇ ಒಕ್ಕಲಿಗರ ಬೀದಿ ಅಶ್ವತ್ಥ್ ಕಟ್ಟಡ ತಲುಪಿ ಎಣ್ಣೆ ಗಾಣಿಗರ ಬೀದಿಯ ಮುಂಭಾಗ ಸೇರಿಕೊಂಡಂತೆ ಪೇಟೆ ಬೀದಿ ಮುಖಾಂತರ ಕುವೆಂಪು ವೃತ್ತ ತಲುಪುವುದು. **ಚಕ್ಕುಬಂದಿ** ಪೂರ್ವ :ಶಿಂಷಾನದಿ ಮತ್ತು ವೈದ್ಯನಾಥಪುರ ಗಡಿ ಪಶ್ಚಿಮ :ಹಳೇ ವೈದ್ಯನಾಥಪುರ ರಸ್ತೆ ಉತ್ತರ : ಹೊಳೆ ಬೀದಿ ದಕ್ಷಿಣ :ನಗರಕೆರೆ ಗಡಿ.
14	14-ಮದ್ದೂರು ನಗರಸಭೆ	ಹಳೇ ಒಕ್ಕಲಿಗರ ಬೀದಿ ಅರಳೀಕಟ್ಟೆಯಿಂದ ದಕ್ಷಿಣಾಭಿಮುಖವಾಗಿ ಚಲಿಸಿ ಹಳೇ ವೈದ್ಯನಾಥಪುರ ರಸ್ತೆ ಮುಖಾಂತರ ಚಲಿಸಿ ಸರ್ವೆ ನಂ 723 ತಲುಪಿ ಪಶ್ಚಿಮಾಭಿಮುಖವಾಗಿ ಚಲಿಸಿ ಕೆಮ್ಮಣ್ಣು ನಾಲೆ ತಲುಪಿ ಸರ್ವೆ ನಂ 718ರ ಮೂಲಕ ಕೆಮ್ಮಣ್ಣು ನಾಲೆ ಮುಖಾಂತರ ಹಳೇ ಎಂ.ಸಿ ರಸ್ತೆ ತಲುಪಿ ಪೂರ್ವಾಭಿಮುಖವಾಗಿ ಚಲಿಸಿ ಎಣ್ಣೆ ಗಾಣಿಗರ ಬೀದಿ ಮುಖಾಂತರ ಅರಳೀಕಟ್ಟೆ ತಲುಪುವುದು. **ಚಕ್ಕುಬಂದಿ** ಪೂರ್ವ :ಹಳೇವೈದ್ಯನಾಥಪುರರಸ್ತೆ ಪಶ್ಚಿಮ : ಕೆಮ್ಮಣ್ಣು ನಾಲೆ ಉತ್ತರ :ಹಳೇ ಎಂ.ಸಿ ರಸ್ತೆ ಮತ್ತು ಎಣ್ಣೆ ಗಾಣಿಗರ ಬೀದಿ. ದಕ್ಷಿಣ : ವೈದ್ಯನಾಥಪುರ ರಸ್ತೆ ಮತ್ತು ಸರ್ವೆ ನಂ 718
15	15-ಮದ್ದೂರು ನಗರಸಭೆ	ಕೆಮ್ಮಣ್ಣು ಕಾಲುವೆ ಸರ್ಕಲ್‌ನಿಂದ ದಕ್ಷಿಣಾಭಿಮುಖವಾಗಿ ಚಲಿಸಿ ಸಿದ್ಧಾರ್ಥನಗರ 1ನೇ ಕ್ರಾಸ್ ಮುಖಾಂತರ ಮುಸ್ಲಿಂ ಬ್ಲಾಕ್ -2ನೇ ಕ್ರಾಸ್ ಹೈಸ್ಕೂಲ್ ಕಾಂಪೌಂಡ್ ತಲುಪಿ ಶ್ರೀನಿವಾಸ ಬೇಕರಿ ಮುಂಭಾಗ ಹಳೇ ಎಂ.ಸಿ. ರಸ್ತೆ ತಲುಪಿ ಎಸ್.ಬಿ.ಎಂ.ರಸ್ತೆಯಿಂದ ಬೆಂಗಳೂರು-ಮೈಸೂರು ರಸ್ತೆ ತಲುಪಿ ಕಪ್ಪೆಚನ್ನಪ್ಪ ವಠಾರದ ಕೆಮ್ಮಣ್ಣು ನಾಲೆ ಸರ್ಕಲ್ ತಲುಪಿ,ದೊಡ್ಡಿ ಬೀದಿ ಮುಖಾಂತರ ಹಳೇ ಎಂ.ಸಿ. ರಸ್ತೆಯಿಂದ ಕೆಮ್ಮಣ್ಣು ಸರ್ಕಲ್ ತಲುಪುವುದು. **ಚಕ್ಕುಬಂದಿ** ಪೂರ್ವ :ದೊಡ್ಡಿ ೀದಿ ಮತ್ತು ಕೆಮ್ಮಣ್ಣು ಕಾಲುವೆ ಸರ್ಕಲ್ ಪಶ್ಚಿಮ : ಎಸ್.ಬಿ.ಐ.ಬ್ಯಾಂಕ್ ರಸ್ತೆ & ಹೈಸ್ಕೂಲ್ ಕಾಂಪೌಂಡ್ ಉತ್ತರ : ಬೆಂಗಳೂರು-ಮೈಸೂರುರಸ್ತೆ ದಕ್ಷಿಣ :ಸಿದ್ಧಾರ್ಥನಗರ1ನೇಕ್ರಾಸ್.
16	16-ಮದ್ದೂರು ನಗರಸಭೆ	ನಗರಕರೆ ರಸ್ತೆ ಮುಖಾಂತರ ಚಲಿಸಿ ಸಿದ್ಧಾರ್ಥನಗರ 8ನೇಕ್ರಾಸ್ ಪಶ್ಚಿಮಾಭಿಮುಖವಾಗಿ ಚಲಿಸಿ ರಾಂ-ರಹೀಂ ನಗರ ಸಿದ್ಧಾರ್ಥನಗರ ಮಧ್ಯರಸ್ತೆ ತಲುಪಿ ಬಲಭಾಗ ಸೇರಿಕೊಂಡಂತೆ ಉತ್ತರಾಭಿಮುಖವಾಗಿ ಸಿದ್ಧಾರ್ಥನಗರ 1ನೇ ಕ್ರಾಸ್ ತಲುಪಿ ಬಲಭಾಗ ಸೇರಿಕೊಂಡಂತೆ ನಗರಕೆರೆ ರಸ್ತೆ ತಲುಪುವುದು. **ಚಕ್ಕುಬಂದಿ** ಪೂರ್ವ :ನಗರಕೆರೆರಸ್ತೆ ಪಶ್ಚಿಮ : ರಾಂರಹೀಂನಗರ&ಸಿದ್ಧಾರ್ಥನಗರಮಧ್ಯರಸ್ತೆ ಉತ್ತರ : ಸಿದ್ಧಾರ್ಥನಗರ1ನೇಕ್ರಾಸ್ ದಕ್ಷಿಣ : ಸಿದ್ಧಾರ್ಥನಗರ8ನೇಕ್ರಾಸ್
17	17-ಮದ್ದೂರು ನಗರಸಭೆ	ಸಿದ್ಧಾರ್ಥನಗರ ರಾಂ ರಹೀಂನಗರ ರಸ್ತೆ ಮುಖಾಂತರ ದಕ್ಷಿಣಾಭಿಮುಖವಾಗಿ ಚಲಿಸಿ ಸ್ವೀಡಿಯಂ ರಸ್ತೆಗೆ ಹೋಗುವ ರಸ್ತೆ ತಲುಪಿ ಗೊರವನಹಳ್ಳಿ ರಸ್ತೆ ತಲುಪುವುದು, ಗೊರವನಹಳ್ಳಿ ರಸ್ತೆ ಉತ್ತರಾಭಿಮುಖವಾಗಿ ಚಲಿಸಿ ಹಳೇ ಎಂ.ಸಿ.ರಸ್ತೆ ಬಲಭಾಗ ಸೇರಿಕೊಂಡಂತೆ ಸರ್ಕಾರಿ ಹೈಸ್ಕೂಲ್ ಸೇರಿಕೊಂಡಂತೆ ಮುಸ್ಲಿಂ ಬ್ಲಾಕ್ 2ನೇ ಕ್ರಾಸ್ ಬಲಭಾಗ ಸೇರಿದಂತೆ ಸಿದ್ಧಾರ್ಥ ನಗರ & ರಾಂ ರಹೀಂನಗರದ ಮಧ್ಯ ರಸ್ತೆ ತಲುಪುವುದು. **ಚಕ್ಕುಬಂದಿ** ಪೂರ್ವ :ಸಿದ್ಧಾರ್ಥನಗರ&ರಾಂರಹೀಂನಗರ ಪಶ್ಚಿಮ : ಗೊರವನಹಳ್ಳಿರಸ್ತೆ ಉತ್ತರ :ಹಳೇಎಂ.ಸಿ.ರಸ್ತೆ. ದಕ್ಷಿಣ :ಸ್ವೀಡಿಯಂ&ಮುಸ್ಲಿಂಬ್ಲಾಕ್ ರಸ್ತೆ.

18	18-ಮದ್ದೂರು ನಗರಸಭೆ	ಪೂರ್ವದಿಂದ ನಗರಕೆರೆ ರಸ್ತೆ ಮುಖಾಂತರ ಬಿಡಿಗಂಡಿ ವೆಟ್‌ವೆಲ್ ತಲುಪಿ ಕೆಮ್ಮಣ್ಣು ಕಾಲುವೆ ರಸ್ತೆ ಮುಖಾಂತರ ವಿ.ವಿ.ನಗರ 1ನೇ ಕ್ರಾಸ್ ತಲುಪಿ ಬಲಭಾಗ ಸೇರಿಕೊಂಡಂತೆ ಪಶ್ಚಿಮಾಭಿಮುಖವಾಗಿ ಚಲಿಸಿ ಕರ್ನಾಟಕ ಟೆಂಟ್ ಗೊರವನಹಳ್ಳಿ ರಸ್ತೆ ತಲುಪಿ ಉತ್ತರಾಭಿಮುಖವಾಗಿ ಚಲಿಸಿ ಮುಸ್ಲಿಂ ಸ್ಮಶಾನ ಸೇರಿಕೊಂಡಂತೆ ಸ್ವೀಡಿಯಂ ಪಕ್ಕದ ರಸ್ತೆ ಮುಖಾಂತರ ಪೂರ್ವಾಭಿಮುಖವಾಗಿ ಚಲಿಸಿ ನಗರಕೆರೆ ರಸ್ತೆ ತಲುಪುವುದು . **ಚಕ್ಕುಬಂದಿ** ಪೂರ್ವ :ನಗರಕೆರೆರಸ್ತೆ&ಕೆಮ್ಮಣ್ಣುನಾಲೆರಸ್ತೆ ಪಶ್ಚಿಮ : ಗೊರವನಹಳ್ಳಿರಸ್ತೆ ಉತ್ತರ : ಸ್ವೀಡಿಯಂಪಕ್ಕದರಸ್ತೆ ದಕ್ಷಿಣ :ವಿ.ವಿ. ನಗರ1ನೇಕ್ರಾಸ್
19	19-ಮದ್ದೂರು ನಗರಸಭೆ	ನಗರಕರೆ ರಸ್ತೆಯಿಂದ ಪ್ರಾರಂಭಗೊಂಡು ಚನ್ನಸಂದ್ರ ಗಡಿಭಾಗದ ಮೂಲಕ ಬಲಭಾಗದ ಮನೆಗಳು ಸೇರಿಕೊಂಡಂತೆ ಸರ್ವೇ ನಂಬರ್ ಜಮೀನು ಸೇರಿಕೊಂಡು ಪಶ್ಚಿಮಾಭಿಮುಖವಾಗಿ ಚಲಿಸಿ ಕರ್ನಾಟಕ ಟೆಂಟ್ ಗೊರವನಹಳ್ಳಿ ರಸ್ತೆ ತಲುಪುವುದು ಹಾಗೂ ದಕ್ಷಿಣ ಭಾಗದಿಂದ ಉತ್ತರ ದಿಕ್ಕಿಗೆ ಚಲಿಸಿ ವಿ.ವಿ.ನಗರ 1ನೇ ಕ್ರಾಸ್ ತಲುಪುವುದು.ನಂತರ ಪಶ್ಚಿಮದಿಂದ ಪೂರ್ವ ದಿಕ್ಕಿಗೆ ಚಲಿಸಿ ನಗರಕೆರೆ ರಸ್ತೆ ತಲುಪಿ ಕೊನೆಗೊಳ್ಳುತ್ತದೆ. **ಚಕ್ಕುಬಂದಿ** ಪೂರ್ವ : ನಗರಕೆರೆ ರಸ್ತೆ ಪಶ್ಚಿಮ : ಗೊರವನಹಳ್ಳಿರಸ್ತೆ ಉತ್ತರ :ವಿ.ವಿ. ನಗರ೧ನೇಕ್ರಾಸ್. ದಕ್ಷಿಣ :ಚನ್ನಸಂದ್ರಗಡಿಭಾಗ.
20	20-ಮದ್ದೂರು ನಗರಸಭೆ	ಬೆಂಗಳೂರು-ಮೈಸೂರು ರಸ್ತೆಯಿಂದ ಎಸ್.ಬಿ.ಎಂ.ರಸ್ತೆ ಮುಖಾಂತರ ಚಲಿಸಿ ಹಳೇ ಎಂ.ಸಿ ರಸ್ತೆ ತಲುಪಿ ಪಶ್ಚಿಮಾಭಿಮುಖವಾಗಿ ಚಲಿಸಿ ಟಿ.ಬಿ.ಸರ್ಕಲ್ ತಲುಪುವುದು.ಬೆಂಗಳೂರು-ಮೈಸೂರು ರಸ್ತೆ ಮೂಲಕ ಎಸ್.ಬಿ.ಎಂ.ರಸ್ತೆ ತಲುಪುವುದು. **ಚಕ್ಕುಬಂದಿ** ಪೂರ್ವ : ಎಸ್.ಬಿ.ಐ ರಸ್ತೆ ಪಶ್ಚಿಮ : ಟಿ.ಬಿ ಸರ್ಕಲ್ ಉತ್ತರ : ಬೆಂಗಳೂರು-ಮೈಸೂರುರಸ್ತೆ ದಕ್ಷಿಣ :ಹಳೇಎಂ.ಸಿರಸ್ತೆ
21	21-ಮದ್ದೂರು ನಗರಸಭೆ	ಸ್ವೀಡಿಯಂ ರಸ್ತೆ ಮುಖಾಂತರ ಗೊರವನಹಳ್ಳಿ ರಸ್ತೆಯ ದಕ್ಷಿಣ ಮುಖವಾಗಿ ಚಲಿಸಿ ಲೀಲಾವತಿ ಬಡಾವಣೆ 4ನೇ ಕ್ರಾಸ್ ಕೃಷ್ಣನ ಅಂಗಡಿ ಸೇರಿಕೊಂಡಂತೆ ಪಶ್ಚಿಮಾಭಿಮುಖವಾಗಿ ಚಲಿಸಿ ಬಲಭಾಗಕ್ಕೆ ತಿರುಗಿ ಲೀಲಾವತಿ ಬಡಾವಣೆ 5ನೇ ಕ್ರಾಸ್ ಮುಖಾಂತರ ಚಲಿಸಿ ಗೊರವನಹಳ್ಳಿ ಟ್ಯಾಂಕ್ ರಸ್ತೆ ತಲುಪುವುದು. ಉತ್ತರಾಭಿಮುಖವಾಗಿ ಚಲಿಸಿ ಹಳೇ ಎಂ.ಸಿ.ರಸ್ತೆ ತಲುಪಿ ಪೂರ್ವಾಭಿಮುಖವಾಗಿ ಚಲಿಸಿ ಸ್ವೀಡಿಯಂ ಮುಂಭಾಗದ ಗೊರವನಹಳ್ಳಿ ರಸ್ತೆ ತಲುಪುವುದು. **ಚಕ್ಕುಬಂದಿ** ಪೂರ್ವ : ಸ್ವೀಡಿಯಂ ಮುಂಭಾಗದ ರಸ್ತೆ ಮತ್ತು ಗೊರವನಹಳ್ಳಿ ರಸ್ತೆ ಪಶ್ಚಿಮ :ಗೊರವನಹಳ್ಳಿ ಟ್ಯಾಂಕ್ ರಸ್ತೆ ಉತ್ತರ :ಹಳೇಎಂ.ಸಿರಸ್ತೆ ದಕ್ಷಿಣ :ಲೀಲಾವತಿ ಬಡಾವಣೆ 4ನೇ ಕ್ರಾಸ್
22	22-ಮದ್ದೂರು ನಗರಸಭೆ	ಕರ್ನಾಟಕ ಟೆಂಟ್ ರಸ್ತೆ ಮುತ್ತುರಾಜು ಮನೆಯ ಗೊರವನಹಳ್ಳಿ ಗಡಿ ಭಾಗ ಸೇರಿಕೊಂಡಂತೆ ಮತ್ತು ಗೊರವನಹಳ್ಳಿ ಟ್ಯಾಂಕ್ ರಸ್ತೆ ತಲುಪಿ ಉತ್ತರಾಭಿಮುಖವಾಗಿ ಚಲಿಸಿ ಲೀಲಾವತಿ ಬಡಾವಣೆ 5ನೇ ಕ್ರಾಸ್ ತಲುಪಿ ಬಲಭಾಗ ಸೇರಿದಂತೆ ಪಶ್ಚಿಮದಿಂದ ಪೂರ್ವಾಭಿಮುಖವಾಗಿ ಚಲಿಸಿ ಕರ್ನಾಟಕ ಟೆಂಟ್ ರಸ್ತೆ ಮುತ್ತುರಾಜು ಮನೆ ತಲುಪುವುದು. **ಚಕ್ಕುಬಂದಿ** ಪೂರ್ವ :ಗೊರವನಹಳ್ಳಿ ಟೆಂಟ್ ರಸ್ತೆ ಪಶ್ಚಿಮ :ಗೊರವನಹಳ್ಳಿ ಟ್ಯಾಂಕ್ ರಸ್ತೆ ಉತ್ತರ ::ಲೀಲಾವತಿ ಬಡಾವಣೆ 4 ಮತ್ತು 5ನೇ ಕ್ರಾಸ್. ದಕ್ಷಿಣ :ಗೊರವನಹಳ್ಳಿ ಗಡಿ.

23	23-ಮದ್ದೂರು ನಗರಸಭೆ	ಗೊರವನಹಳ್ಳಿ ಟ್ಯಾಂಕ್ ರಸ್ತೆ ದಕ್ಷಿಣಾಭಿಮುಖವಾಗಿ ಚಲಿಸಿ ಗೊರವನಹಳ್ಳಿ ಗಡಿ ಭಾಗ ಸೇರಿಕೊಂಡಂತೆ ಮಳವಳ್ಳಿ ರಸ್ತೆಯ ಮೂಲಕ ಉತ್ತರಾಭಿಮುಖವಾಗಿ ಚಲಿಸಿ ಟಿ.ಬಿ ಸರ್ಕಲ್ ತಲುಪಿ ಪೂರ್ವಾಭಿಮುಖವಾಗಿ ಬಲಭಾಗದ ಮನೆಗಳು ಸೇರಿಕೊಂಡಂತೆ ಗೊರವನಹಳ್ಳಿ ಟ್ಯಾಂಕ್ ರಸ್ತೆ ತಲುಪುವುದು. **ಚಕ್ಕುಬಂದಿ** ಪೂರ್ವ :ಗೊರವನಹಳ್ಳಿಟ್ಯಾಂಕ್ ರಸ್ತೆ. ಪಶ್ಚಿಮ :ಮಳವಳ್ಳಿರಸ್ತೆ ಉತ್ತರ ::ಲೀಲಾವತಿಬಡಾವಣೆ4 ಮತ್ತು 5ನೇಕ್ರಾಸ್. ದಕ್ಷಿಣ :ಗೊರವನಹಳ್ಳಿಗಡಿ.
24	24-ಮದ್ದೂರು ನಗರಸಭೆ	ಹೆಚ್.ಕೆ.ವಿ.ನಗರ ಹೆಚ್.ಕೆ. ವೀರಣ್ಣ ಕಾಲೇಜ್‌ನಿಂದ ಪ್ರಾರಂಭಗೊಂಡು ಬೆಂಗಳೂರು ಮೈಸೂರು ರಸ್ತೆ ಪೂರ್ವಾಭಿಮುಖವಾಗಿ ಚಲಿಸಿ ಸಿದ್ದೇಗೌಡ ಆಸ್ಪತ್ರೆ ಮುಂಭಾಗದ ರಸ್ತೆ ಡಿಪೋ ರಸ್ತೆ ಮುಖಾಂತರ ಚಲಿಸಿ ಜಯಲಕ್ಷ್ಮಿ ನಂಜಪ್ಪ ಕಲ್ಯಾಣ ಮಂಟಪ ಸೇರಿದಂತೆ ಪಶ್ಚಿಮಾಭಿಮುಖವಾಗಿ ಚಲಿಸಿ ಚನ್ನೇಗೌಡನದೊಡ್ಡಿ ಹಾಲಿನ ಡೈರಿ ಸೇರಿದಂತೆ ವಳಗೆರಹಳ್ಳಿ ರಸ್ತೆ ತಲುಪುವುದು . **ಚಕ್ಕುಬಂದಿ** ಪೂರ್ವ :ಸಿದ್ದೇಗೌಡ ಆಸ್ಪತ್ರೆ ಡಿಪೋ ರಸ್ತೆ. ಪಶ್ಚಿಮ :ವಳಗೆರೆಹಳ್ಳಿರಸ್ತೆ. ಉತ್ತರ : ಜಯಲಕ್ಷ್ಮಿ ನಂಜಪ್ಪ ಕಲ್ಯಾಣಮಂಟಪ ದಕ್ಷಿಣ :ಬೆಂಗಳೂರು-ಮೈಸೂರು ರಸ್ತೆ.
25	25-ಮದ್ದೂರು ನಗರಸಭೆ	ಬೆಂಗಳೂರು-ಮೈಸೂರು ರಸ್ತೆ ಚನ್ನೇಗೌಡನದೊಡ್ಡಿ ಸಿದ್ದರಾಜು ಮನೆಯಿಂದ ಪ್ರಾರಂಭಗೊಂಡು ಉತ್ತರಾಭಿಮುಖವಾಗಿ ತಿರುಗಿ ಎಡಭಾಗದ ಮನೆಗಳನ್ನು ಒಳಗೊಂಡಂತೆ ಮೊಬ್ಬಳಗೆರೆ ಗಡಿ ಸರ್ವೇ ನಂಬರ್ ಸೇರಿಕೊಂಡಂತೆ ದಕ್ಷಿಣಾಭಿಮುಖವಾಗಿ ತಿರುಗಿ ಬೆಂಗಳೂರು-ಮೈಸೂ ರಸ್ತೆ ತಲುಪಿ ಗೆಜ್ಜಲಗೆರೆ ಗ್ರಾಮದ ಗಡಿಯ ಹೆಚ್.ಕೆ.ವಿ.ನಗರ ಎಳನೀರು ಮಂಡಿ ತಲುಪಿ ಕೊನೆಗೊಳ್ಳತಕ್ಕದ್ದು. **ಚಕ್ಕುಬಂದಿ** ಪೂರ್ವ :ಹೆಚ್.ಕೆ.ವಿ.ಕಾಲೇಜು. ಪಶ್ಚಿಮ : ಗೆಜ್ಜಲಗೆರೆಗಡಿ ಉತ್ತರ :ಮೊಬ್ಬಳಗೆರೆಗಡಿ. ದಕ್ಷಿಣ :ಮರಕಾಡದೊಡ್ಡಿ
26	26-ಮದ್ದೂರು ನಗರಸಭೆ	ಪೂರ್ವದಿಂದ ಮಳವಳ್ಳಿ ರಸ್ತೆ ಮುಖಾಂತರ ದಕ್ಷಿಣಾಭಿಮುಖವಾಗಿ ಚಲಿಸಿ ಮರಕಾಡದೊಡ್ಡಿ ಕಾಲುವೆ ರಸ್ತೆ ತಲುಪಿ ಪೂರ್ವಾಭಿಮುಖವಾಗಿ ಚಲಿಸಿ ಟೈಪಿಸ್ಟ್ ಪುಟ್ಟಸ್ವಾಮಿ ಮನೆ ಸೇರಿದಂತೆ ಉತ್ತರಾಭಿಮುಖವಾಗಿ ಚಲಿಸಿ ಪೋಲಿಸ್ ಶಿವರಾಜು ಮನೆ ಸೇರಿದಂತೆ ಹೆಚ್.ಕೆ.ವಿ ನಗರ 4ನೇ ಕ್ರಾಸ್ ಮುಖಾಂತರ ಉತ್ತರಾಭಿಮುಖವಾಗಿ ಚಲಿಸಿ ಬೆಂಗಳೂರು ಮೈಸೂರು ರಸ್ತೆ ತಲುಪಿ ಪೂರ್ವಾಭಿಮುಖವಾಗಿ ಚಲಿಸಿ ಟಿ.ಬಿ ಸರ್ಕಲ್ ತಲುಪುವುದು. **ಚಕ್ಕುಬಂದಿ** ಪೂರ್ವ :ಮಳವಳ್ಳಿರಸ್ತೆ ಪಶ್ಚಿಮ : ಶಿವರಾಜು ಮನೆ ಮುಂಭಾಗದ ರಸ್ತೆ ಉತ್ತರ : ಬೆಂಗಳೂರು ಮೈಸೂರು ರಸ್ತೆ ದಕ್ಷಿಣ :ಮರಕಾಡದೊಡ್ಡಿಗಡಿ.
27	27-ಮದ್ದೂರು ನಗರಸಭೆ	ಗೊರವನಹಳ್ಳಿ ಗ್ರಾಮದ ಸರ್ವೆ ನಂ 13ರಿಂದ ಪ್ರಾರಂಭವಾಗಿ ಉತ್ತರಾಭಿಮುಖವಾಗಿ ಮದ್ದೂರು ಗಡಿ ಮೂಲಕ ಸಾಗಿ ಸರ್ವೆ ನಂ 173ರ ಹತ್ತಿರ ಪೂರ್ವಕ್ಕೆ ತಿರುಗಿ ಉತ್ತರಾಭಿಮುಖವಾಗಿ ಸಾಗಿ ಸರ್ವೆ ನಂ 188ರ ಹತ್ತಿರ ಪಶ್ಚಿಮಾಭಿಮುಖವಾಗಿ ಸಾಗಿ ಸರ್ವೆ ನಂ 36 ತಲುಪಿ ದಕ್ಷಿಣಾಭಿಮುಖವಾಗಿ ಗೊರವನಹಳ್ಳಿ ಗ್ರಾಮದ ಮೂಲಕ ಚನ್ನಸಂದ್ರ ಗಡಿ ತಲುಪಿ ಪೂರ್ವಾಭಿಮುಖವಾಗಿ ಸರ್ವೆ ನಂ 13 ತಲುಪುವುದು. **ಚಕ್ಕುಬಂದಿ** ಪೂರ್ವ : ಮದ್ದೂರು ಮತ್ತು ನಗರಕೆರೆ ಗಡಿ ಪಶ್ಚಿಮ : ಗೊರವನಹಳ್ಳಿ ಉತ್ತರ : ಮದ್ದೂರು ಗಡಿ ದಕ್ಷಿಣ : ಚನ್ನಸಂದ್ರ ಗಡಿ

28	28-ಮದ್ದೂರು ನಗರಸಭೆ	ಮದ್ದೂರು ಮಳವಳ್ಳಿರಸ್ತೆಯಿಂದ ಪೂರ್ವ ದಿಕ್ಕಿಗೆ ನಾಲಾ ರಸ್ತೆಯ ಮುಖವಾಗಿ ಎಡಭಾಗದ ಆಸ್ತಿಗಳು ಸೇರಿಕೊಂಡಂತೆ ಬಲಭಾಗಕ್ಕೆ ಪೂರ್ವಭಿಮುಖವಾಗಿ ಚನ್ನಸಂದ್ರ ರಸ್ತೆಯ ಎಡಭಾಗದ ಆಸ್ತಿಗಳು, ಹಾಗೂ ಚನ್ನಯ್ಯ ದೇವಸ್ಥಾನದ ಮುಂಭಾಗದ ರಸ್ತೆಯಲ್ಲಿನ ಎಲ್ಲಾ ಎಡ ಭಾಗದ ಆಸ್ತಿಗಳು ಅದೇ ರಸ್ತೆಯಲ್ಲಿ ಮಿಲ್ ರವಿ ರಸ್ತೆಯ ಅಕ್ಕಪಕ್ಕದ ಆಸ್ತಿಗಳು, ಮಿಲ್ ರವಿ ಮನೆಯಿಂದ ಪಶ್ಚಿಮಾಭಿಮುಖವಾಗಿ ಅರಳಿಮರದ ತನಕ ಎಡ ಬಲ ಆಸ್ತಿಗಳು ಸೇರಿಕೊಂಡಂತೆ ಹಾಲಿನ ಡೈರಿ ಮುಂಭಾಗದ ರಸ್ತೆ ತಲುಪಿ ಮಳವಳ್ಳಿ ರಸ್ತೆ ತಲುಪುವುದು. **ಚಕ್ಕುಬಂದಿ** ಪೂರ್ವ :ಚನ್ನಸಂದ್ರಮತ್ತು ಕೆಮ್ಮಣ್ಣು ನಾಲೆ. ಪಶ್ಚಿಮ :ಮಳವಳ್ಳಿರಸ್ತೆ ಉತ್ತರ :ಗೊರವನಹಳ್ಳಿಹೊಸಬಡಾವಣೆ ದಕ್ಷಿಣ : ಚನ್ನಸಂದ್ರಗಡಿ
29	29-ಮದ್ದೂರು ನಗರಸಭೆ	ಮಳವಳ್ಳಿ ರಸ್ತೆಯಿಂದ ದಕ್ಷಿಣಾಭಿಮುಖವಾಗಿ ಚಲಿಸಿ ಮರಕಾಡದೊಡ್ಡಿ ಸೇರಿಕೊಂಡಂತೆ ಉತ್ತರಾಭಿಮುಖವಾಗಿ ಚಲಿಸಿ ಹೆಚ್.ಕೆ.ವಿ. ನಗರ ಪುಟ್ಟಸ್ವಾಮಿರವರ ಮನೆಯ ಮುಂಭಾಗದ ರಸ್ತೆ ತಲುಪಿ ಪೋಲಿಸ್ ಶಿವರಾಜುರವರ ಮನೆ ರಸ್ತೆ ಸೇರುವುದು.ಬೆಂಗಳೂರು-ಮೈಸೂರು ರಸ್ತೆ ತಲುಪಿ ಪಶ್ಚಿಮದಿಂದ ಪೂರ್ವಕ್ಕೆ ಚಲಿಸಿ ಮಳವಳ್ಳಿ ರಸ್ತೆ ತಲುಪುವುದು. **ಚಕ್ಕುಬಂದಿ** ಪೂರ್ವ : ಮಳವಳ್ಳಿರಸ್ತೆ ಪಶ್ಚಿಮ : ಗೆಜ್ಜಲಗೆರೆ ಗಡಿ ಉತ್ತರ :ಬಿ.ಎಂ. ರಸ್ತೆ ದಕ್ಷಿಣ :ಕುದರಗುಂಡಿಗಡಿ.
30	30-ಮದ್ದೂರು ನಗರಸಭೆ	ಪೂರ್ವದಿಂದ ಗೊರವನಹಳ್ಳಿ ಗಡಿ ಮತ್ತು ಸರ್ವೆ ನಂಬರ್ :-372,373,374,ಜಮೀನುಗಳನ್ನು ಒಳಗೊಂಡಂತೆ ಪೂರ್ವದಿಂದ ಪಶ್ಚಿಮಮಾಭಿಮುಖವಾಗಿ ಚಲಿಸಿ ಕುದರಗುಂಡಿ ಗಡಿ ತಲುಪುವುದು ಬಲಭಾಗದ ಮನೆಗಳನ್ನು ಒಳಗೊಂಡಂತೆ ಹನಕೆರೆ ಗಡಿ ತಲುಪುವುದು, ಪಶ್ಚಿಮದಿಂದ ಉತ್ತರಾಭಿಮುಖವಾಗಿ ಚಲಿಸಿ ಕೆ.ಎಂ.ಎಫ್.ಡೈರಿ ಸೇರಿಕೊಂಡಂತೆ ರೈಲ್ವೆ ಹಳಿ ತಲುಪುವುದು ರೈಲ್ವೆ ಹಳಿ ಚಲಿಸಿ ಗೆಜ್ಜಲಗೆರೆ ಸರ್ವೆ ನಂಬರ್ ಒಳಗೊಂಡಂತೆ ವಳಗೆರಹಳ್ಳಿ ಗಡಿ ತಲುಪಿ ಉತ್ತರದಿಂದ ಪೂರ್ವಾಭಿಮುಖವಾಗಿ ಬೆಂಗಳೂರು-ಮೈಸೂ ರಸ್ತೆ ಚಲಿಸಿ ಕಲ್ಯಾಣ ಮಂಟಪ ಮತ್ತು ಗೊರವನಹಳ್ಳಿ ಗಡಿ ತಲುಪುವುದು. **ಚಕ್ಕುಬಂದಿ** ಪೂರ್ವ : ಗೂರವನಹಳ್ಳಿ ಗಡಿ ಪಶ್ಚಿಮ : ಹನಕೆರೆ ಗಡಿ ಪ್ರದೇಶ ಉತ್ತರ : ಬೆಂಗಳೂರು-ಮೈಸೂರು ರಸ್ತೆಮತ್ತು ವಾರ್ಡ್ ಸಂಖ್ಯೆ 31ರ ಗಡಿ ದಕ್ಷಿಣ :ಕುದರಗುಂಡಿ ಗಡಿ ಮತ್ತು ಗೊರವವನಹಳ್ಳಿ ಗಡಿ.
31	31-ಮದ್ದೂರು ನಗರಸಭೆ	ಮೊಬ್ಬಳಗೆರೆ ಗಡಿಯಸರ್ವೆ ನಂ:-142 ಸೇರಿಕೊಂಡಂತೆ ಬೆಂಗಳೂರು ಮೈಸೂರು ರಸ್ತೆ ತಲುಪಿ ಬೆಂಗಳೂರು-ಮೈಸೂರು ರಸ್ತೆಯಿಂದ ಪಶ್ಚಿಮಾಭಿಮುಖವಾಗಿ ಚಲಿಸಿ ಎಡ ಭಾಗದ ಎಲ್ಲಾ ಸರ್ವೆ ನಂಬರ್ ಜಮೀನುಗಳು ಸೇರಿಕೊಂಡಂತೆ ಹೊನ್ನಗಳ್ಳಿದೊಡ್ಡಿ ಗಡಿ ತಲುಪಿ ಉತ್ತರದಿಂದ ಬಿ ಹೊಸಹಳ್ಳಿ ಗಡಿ ತಲುಪುವುದು ನಂತರ ಬಲಭಾಗ ಸೇರಿಕೊಂಡಂತೆ ಎಲ್ಲಾ ಸರ್ವೆ ನಂಬರ್ ಜಮೀನುಗಳನ್ನು ಒಳಗೊಂಡಂತೆ ಪೂರ್ವಾಭಿಮುಖವಾಗಿ ಚಲಿಸಿ ಸರ್ವೆ ನಂಬರ್ 142 ನ್ನು ಸೇರಿ ಮೊಬ್ಬಳಗೆರೆ ಗಡಿ ತಲುಪುವುದು. **ಚಕ್ಕುಬಂದಿ** ಪೂರ್ವ : ಮೊಬ್ಬಳಗೆರೆ ಗಡಿ ಪಶ್ಚಿಮ : ಹನಕೆರೆ ಗಡಿ ಉತ್ತರ : ವಳಗೆರೆಹಳ್ಳಿ ಮತ್ತು ಬಿ.ಹೊಸಹಳ್ಳಿ ಗಡಿ ದಕ್ಷಿಣ :ಬೆಂಗಳೂರು-ಮೈಸೂರು ರಸ್ತೆ ಮತ್ತು ವಾರ್ಡ್ ಸಂಖ್ಯೆ 30ರ ಗಡಿ

ಜಿಲ್ಲಾಧಿಕಾರಿ
ಮಂಡ್ಯಜಿಲ್ಲೆ, ಮಂಡ್ಯ.

PR-46

ಜಿಲ್ಲಾಧಿಕಾರಿಗಳ ಕಾರ್ಯಾಲಯ, ಹಾಸನ ಜಿಲ್ಲೆ, ಹಾಸನ.

ಸಂಖ್ಯೆ: ಚುನಾವಣೆ(2) 12/2025–26 ದಿನಾಂಕ: 05/03/2026.

ಅಧಿಸೂಚನೆ

ಸರ್ಕಾರದ ಆದೇಶದ ಸಂಖ್ಯೆ: ಗ್ರಾಅಪ 898 ಗ್ರಾಪಂಅ 2025, ದಿನಾಂಕ: 07/01/2026 ರ ಪತ್ರದಂತೆ ಹಾಗೂ ಈ ಕಛೇರಿಯ ಸಂಖ್ಯೆ: ಚುನಾವಣೆ(2) 12/2025–26, ದಿನಾಂಕ: 04/02/2026 ರ ಕರಡು ಅಧಿಸೂಚನೆಯನ್ನು ಪ್ರಕಟಿಸಿ, ಅದರಿಂದ ಭಾದಿತರಾಗುವ ವ್ಯಕ್ತಿಗಳಿಂದ ದಿನಾಂಕ: 10/02/2026 ರಂದು ಅಥವಾ ಅದಕ್ಕೂ ಮುಂಚೆ ಸದರಿ ಕರಡು ಅಧಿಸೂಚನೆಯ ಬಗ್ಗೆ ಆಕ್ಷೇಪಣೆ ಮತ್ತು ಸಲಹೆಗಳನ್ನು ಆಹ್ವಾನಿಸಿ, ಕರ್ನಾಟಕ ಪಂಚಾಯತ್ ರಾಜ್ ಅಧಿನಿಯಮ 1993 ರ ಪ್ರಕರಣ 4 ರಂತೆ ಪ್ರಕಟಿಸಲಾಗಿತ್ತು. ಈ ಕರಡು ಅಧಿಸೂಚನೆಗೆ ಸಂಬಂಧಪಟ್ಟಂತೆ ಬಂದ ಆಕ್ಷೇಪಣೆ ಮತ್ತು ಸಲಹೆಗಳನ್ನು ದಿನಾಂಕ: 05/03/2026 ರಂದು ವಿಚಾರಣೆ ನಡೆಸಲಾಗಿದೆ.

ಕರ್ನಾಟಕ ಪಂಚಾಯತ್ ರಾಜ್ ಅಧಿನಿಯಮ 1993 ರ ಪ್ರಕರಣ 4 ರಲ್ಲಿ ಪ್ರದತ್ತವಾಗಿರುವ ಅಧಿಕಾರವನ್ನು ಚಲಾಯಿಸಿ ಶ್ರೀಮತಿ ಕೆ.ಎಸ್. ಲತಾ ಕುಮಾರಿ, ಭಾ.ಆ.ಸೇ. ಹಾಸನ ಜಿಲ್ಲೆಯ ಜಿಲ್ಲಾಧಿಕಾರಿ ಆದ ನಾನು ಈ ಕೆಳಕಂಡ ಅಧಿಸೂಚನೆಯ (4) ನೇಯ ಅಂಕಣದಲ್ಲಿ ನಿರ್ದಿಷ್ಟಪಡಿಸಿರುವ ಗ್ರಾಮಗಳ ಗುಂಪನ್ನು ಒಳಗೊಂಡಿರುವ ಪ್ರದೇಶವು ಗ್ರಾಮ ಪಂಚಾಯತಿಗೆ ಸೇರಿದ ಗ್ರಾಮಗಳೆಂದು, (3) ನೇಯ ಅಂಕಣದಲ್ಲಿ ನಿರ್ದಿಷ್ಟಪಡಿಸಿರುವ ಗ್ರಾಮ ಪಂಚಾಯತಿಯ ಕೇಂದ್ರ ಸ್ಥಾನವಾಗಿರತಕ್ಕದ್ದೆಂದೂ, ಈ ಮೂಲಕ ಘೋಷಿಸಿದ್ದೇನೆ.

ತಾಲ್ಲೂಕು: ಅರಸೀಕೆರೆ

ಕ್ರ. ಸಂ.	ಗ್ರಾಮ ಪಂಚಾಯತಿ ಹೆಸರು	ಗ್ರಾಮ ಪಂಚಾಯತಿಯ ಕೇಂದ್ರ ಸ್ಥಾನ	ಹಾಲಿ ಗ್ರಾಮ ಪಂಚಾಯತಿ ವ್ಯಾಪ್ತಿಗೆ ಸೇರಿರುವ ಗ್ರಾಮಗಳು
1	2	3	4
12		ಕುರುವಂಕ	1) ಕುರುವಂಕ, 2) ಕೋಡಿಹಳ್ಳಿ, 3) ರಂಗಾಪುರ, 4) ಕುರುವಂಕ ವಡ್ಡರಹಟ್ಟಿ, 5) ನಂಜನಾಯ್ಕನ ಕೊಪ್ಪಲು, 6) ಕೆ.ಜಿ.ಅಗ್ರಹಾರ, 7) ಬುಚ್ಚನ ಕೊಪ್ಪಲು, 8) ಯರೇಹಳ್ಳಿ, 9) ಕರಡೀಹಳ್ಳಿ, 10) ಹಂದಿಜೋಗಿ ಕಾಲೋನಿ, 11) ಲಂಗೋಡನಹಳ್ಳಿ, 12) ಕೊಮ್ಮಾರಘಟ್ಟ, 13) ಕೊಮ್ಮಾರಘಟ್ಟ ಬಿ ತಾಂಡ್ಯ, 14) ಕುರುಬರಹಳ್ಳಿ, 15) ಸುಂಕದಹಳ್ಳಿ, 16) ಕುರುಬರಹಳ್ಳಿ ತಾಂಡ್ಯ, 17) ತಿಪ್ಪಾಘಟ್ಟ, 18) ಗೊಲ್ಲರಹಟ್ಟಿ, 19) ನಾಯಕರಹಟ್ಟಿ, 20) ಭೈರಗೋಡನಹಳ್ಳಿ (ಭಾಗಶಃ), 21) ಮೇಗಲವಡ್ಡರಹಟ್ಟಿ.
17	ಹಿರಿಯೂರು	ಹಿರಿಯೂರು	1) ಹಿರಿಯೂರು, 2) ತಿಮ್ಮಪ್ಪಯ್ಯನಹಳ್ಳಿ, 3) ತಿಮ್ಮಶೆಟ್ಟಿಹಳ್ಳಿ, 4) ಹರಿಹರಪುರ, 5) ಮಾಸ್ತಿಹಳ್ಳಿ, 6) ಕಾನೀಹಳ್ಳಿ, 7) ಚಲುವನಹಳ್ಳಿ, 8) ತ್ಯಾಪೇಗೌಡರ ಗೊಲ್ಲರಹಟ್ಟಿ, 9) ಸಣ್ಣೇಗೌಡನ ಗೊಲ್ಲರಹಟ್ಟಿ, 10) ಗಾಂಧಿನಗರ, 11) ರಾಂಪುರ, 12) ಬೈರಾಂಬುದಿ, 13) ಬೆಟ್ಟದಪುರ, 15) ಬಿಸಲೇಹಳ್ಳಿ, 16) ಕಾರಬೋರನಹಟ್ಟಿ.
21	ಶ್ಯಾನೇಗೆರೆ	ಶ್ಯಾನೇಗೆರೆ	1) ಶ್ಯಾನೇಗೆರೆ, 2) ತಿಮ್ಮನಹಳ್ಳಿ, 3) ಗಂಜಿಗೆರೆ, 4) ಗಿರೋಜಿಕೊಪ್ಪಲು, 5) ದೊಡ್ಡೇನಹಳ್ಳಿ, 6) ಜಿ.ಹೊಸಹಳ್ಳಿ, 7) ಅರೇಹಳ್ಳಿ, 8) ಜಿ.ಪುರ, 9) ಮದನೀಪುರ (ಬೇ), 10) ಚಾಕನಕಟ್ಟೆ, 11) ನಾಗಸಮುದ್ರ, 12) ಗೊಲ್ಲರಹಟ್ಟಿ, 13) ರಂಗನಾಯ್ಕನ ಕೊಪ್ಪಲು, 14) ತೊಂಡಿಗನಹಳ್ಳಿ, 15) ಹಂಗುರುಬರಹಟ್ಟಿ, 16) ತಿಪ್ಪನಹಳ್ಳಿ (ಬೇ), 17) ಹನುಮನಹಳ್ಳಿ, 18) ಶಂಕರನಹಳ್ಳಿ (ಗರುಡನಗಿರಿ), 19) ಮಣಕತ್ತೂರು, 20) ಕೆ.ವೆಂಕಟಾಪುರ, 21) ಹಾರುವನಹಳ್ಳಿ (ಬೇ), 22) ಬಸವನಹಳ್ಳಿ, 23) ಗಾಂಧಿನಗರ (ಕೆಂಗುರುಬರಹಟ್ಟಿ), 24) ಬಾಣರಸನಹಳ್ಳಿ (ಬೇ), 25) ಭೈರಾಪುರ (ವಾ), 26) ಚಿಕ್ಕಾರೇಹಳ್ಳಿ, 27) ಭೈರಾಪುರ.

30	ಕಾಚೀಪಟ್ಟ	ಕಾಚೀಪಟ್ಟ	1) ಕಾಚೀಪಟ್ಟ, 2) ಕೆಳಗಿನ ವಡ್ಡರಹಟ್ಟಿ, 3) ಮೇಲಿನ ವಡ್ಡರಹಟ್ಟಿ, 4) ವಡೇರಹಳ್ಳಿ, 5) ಬೇವಿನಹಳ್ಳಿ, 6) ದೊಡ್ಡೇನಹಳ್ಳಿ, 7) ಹನುಮಂತನಗರ (ಕೋರನಹಳ್ಳಕೊಪ್ಪಲು), 8) ಬಣಜಾರ್ ತಾಂಡ್ಯ, 9) ಗೊಲ್ಲರಹಟ್ಟಿ, 10) ಕೀರನಾಯ್ಕನಹಟ್ಟಿ, 10) ಕೋರನಹಳ್ಳಿ, 11) ಕೆಂಚೇನಹಳ್ಳಿ, 12) ಹೊಸಹಟ್ಟಿ.
45	ಬಾಣಾವರ	ಬಾಣಾವರ	ಬಾಣಾವರ ಗ್ರಾಮ ಪಂಚಾಯಿತಿಯು ಸಂಪೂರ್ಣ ಅಸ್ಥಿತ್ವ ಕಳೆದುಕೊಂಡಿರುತ್ತದೆ.

(ಕೆ.ಎಸ್. ಲತಾ ಕುಮಾರಿ, ಭಾ.ಆ.ಸೇ.)
ಜಿಲ್ಲಾಧಿಕಾರಿ,
ಹಾಸನ ಜಿಲ್ಲೆ, ಹಾಸನ.

PR-47

ಜಿಲ್ಲಾಧಿಕಾರಿಗಳ ಕಾರ್ಯಾಲಯ, ಹಾಸನ ಜಿಲ್ಲೆ, ಹಾಸನ.

ಸಂಖ್ಯೆ: ಚುನಾವಣೆ(2) 12/2025–26 ದಿನಾಂಕ: 05/03/2026.

ಅಧಿಸೂಚನೆ

ಸರ್ಕಾರದ ಆದೇಶದ ಸಂಖ್ಯೆ: ಗ್ರಾಅಪ 898 ಗ್ರಾಪಂಅ 2025, ದಿನಾಂಕ: 07/01/2026 ರ ಪತ್ರದಂತೆ ಹಾಗೂ ಈ ಕಛೇರಿಯ ಸಂಖ್ಯೆ: ಚುನಾವಣೆ(2) 12/2025–26, ದಿನಾಂಕ: 04/02/2026 ರ ಕರಡು ಅಧಿಸೂಚನೆಯನ್ನು ಪ್ರಕಟಿಸಿ, ಅದರಿಂದ ಭಾದಿತರಾಗುವ ವ್ಯಕ್ತಿಗಳಿಂದ ದಿನಾಂಕ: 10/02/2026 ರಂದು ಅಥವಾ ಅದಕ್ಕೂ ಮುಂಚೆ ಸದರಿ ಕರಡು ಅಧಿಸೂಚನೆಯ ಬಗ್ಗೆ ಆಕ್ಷೇಪಣೆ ಮತ್ತು ಸಲಹೆಗಳನ್ನು ಆಹ್ವಾನಿಸಿ, ಕರ್ನಾಟಕ ಪಂಚಾಯತ್ ರಾಜ್ ಅಧಿನಿಯಮ 1993 ರ ಪ್ರಕರಣ 4 ರಂತೆ ಪ್ರಕಟಿಸಲಾಗಿತ್ತು. ಈ ಕರಡು ಅಧಿಸೂಚನೆಗೆ ಸಂಬಂಧಪಟ್ಟಂತೆ ಬಂದ ಆಕ್ಷೇಪಣೆ ಮತ್ತು ಸಲಹೆಗಳನ್ನು ದಿನಾಂಕ: 05/03/2026 ರಂದು ವಿಚಾರಣೆ ನಡೆಸಲಾಗಿದೆ.

ಕರ್ನಾಟಕ ಪಂಚಾಯತ್ ರಾಜ್ ಅಧಿನಿಯಮ 1993 ರ ಪ್ರಕರಣ 4 ರಲ್ಲಿ ಪ್ರದತ್ತವಾಗಿರುವ ಅಧಿಕಾರವನ್ನು ಚಲಾಯಿಸಿ ಶ್ರೀಮತಿ ಕೆ.ಎಸ್. ಲತಾ ಕುಮಾರಿ, ಭಾ.ಆ.ಸೇ. ಹಾಸನ ಜಿಲ್ಲೆಯ ಜಿಲ್ಲಾಧಿಕಾರಿ ಆದ ನಾನು ಈ ಕೆಳಕಂಡ ಅಧಿಸೂಚನೆಯ (4) ನೇಯ ಅಂಕಣದಲ್ಲಿ ನಿರ್ದಿಷ್ಟಪಡಿಸಿರುವ ಗ್ರಾಮಗಳ ಗುಂಪನ್ನು ಒಳಗೊಂಡಿರುವ ಪ್ರದೇಶವು ಗ್ರಾಮ ಪಂಚಾಯಿತಿಗೆ ಸೇರಿದ ಗ್ರಾಮಗಳೆಂದು, (3) ನೇಯ ಅಂಕಣದಲ್ಲಿ ನಿರ್ದಿಷ್ಟಪಡಿಸಿರುವ ಗ್ರಾಮ ಪಂಚಾಯಿತಿಯ ಕೇಂದ್ರ ಸ್ಥಾನವಾಗಿರತಕ್ಕದ್ದೆಂದೂ, ಈ ಮೂಲಕ ಘೋಷಿಸಿದ್ದೇನೆ.

ತಾಲ್ಲೂಕು: ಹಾಸನ

ಕ್ರ. ಸಂ.	ಗ್ರಾಮ ಪಂಚಾಯಿತಿ ಹೆಸರು	ಗ್ರಾಮ ಪಂಚಾಯಿತಿಯ ಕೇಂದ್ರ ಸ್ಥಾನ	ಹಾಲಿ ಗ್ರಾಮ ಪಂಚಾಯಿತಿ ವ್ಯಾಪ್ತಿಗೆ ಸೇರಿರುವ ಗ್ರಾಮಗಳು
1	2	3	4
9	ದೊಡ್ಡಗೇಣಿಗೆರೆ	ದೊಡ್ಡಗೇಣಿಗೆರೆ	1) ದೊಡ್ಡಗೇಣಿಗೆರೆ, 2) ಚಿಕ್ಕಾಲದಹಳ್ಳಿ (ದಾ), 3) ಚಿಕ್ಕಗೇಣಿಗೆರೆ, 4) ತ್ಯಾವಿಹಳ್ಳಿ, 5) ಪಿರುಮೇನಹಳ್ಳಿ, 6) ಹೆಗ್ಗಡಿಹಳ್ಳಿ, 7) ಬುರುಡಾಳ್ ಬೋರೆ, 8) ಹೆಗ್ಗಡಿಹಳ್ಳಿ ಕಾವಲು, 9) ಉಪ್ಪಾರ ಹೊಸಹಳ್ಳಿ, 10) ದೊಡ್ಡಾಲದಹಳ್ಳಿ, 11) ಅಂಕನಹಳ್ಳಿ (ಬೆ), 12) ದೊಡ್ಡಹೊನ್ನೇನಹಳ್ಳಿ.

12	ಹನುಮಂತಪುರ	ಹನುಮಂತಪುರ	1) ಪಿರುಮೇನಹಳ್ಳಿ, 2) ಕಬ್ಬಿನಹಳ್ಳಿ, 3) ಅಗಿಲೆ, 4) ಯರೆಬೋರೆ ಕಾವಲ್ (ಬಿ), 5) ದೊಡ್ಡಭಾಗನಹಳ್ಳಿ, 6) ಚಿಕ್ಕಭಾಗನಹಳ್ಳಿ, 7) ಹನುಮಂತಪುರ, 8) ಎಸ್. ತಟ್ಟೆಕೆರೆ, 9) ಸಮುದ್ರವಳ್ಳಿ, 10) ಸಿಂಗಪಟ್ಟಣ.
16	ಹೂವಿನಹಳ್ಳಿ ಕಾವಲ್	ಹೂವಿನಹಳ್ಳಿ ಕಾವಲ್	1) ಅಗಲಹಳ್ಳಿ, 2) ಅಗಲಹಳ್ಳಿ ಕೊಪ್ಪಲು, 3) ಕುಪ್ಪಳ್ಳಿ, 4) ಕುಪ್ಪಳ್ಳಿ ಕೊಪ್ಪಲು, 5) ಜನಿವಾರ, 6) ಹೂವಿನಹಳ್ಳಿ, 7) ಹೂವಿನಹಳ್ಳಿ ಕಾವಲು, 8) ಹೂವಿನಹಳ್ಳಿ ಕೊಪ್ಪಲು (ದಾ), 9) ಕೋರಹಳ್ಳಿ, 10) ನಂಜೇದೇವರ ಕಾವಲು, 11) ಕಿಂಡೀಪುರ, (ಮುಗಳೂರು), 12) ಎನ್.ಹಂದಿನಕೆರೆ, 13)ಕಿಂಡೀಪುರ ಕೊಪ್ಪಲು(ದಾ), 14) ಹಂದಿನಕೆರೆ, 15) ಹರಳಹಳ್ಳಿ (ದಾ).
18	ಕಬ್ಬಳಿ	ಕಬ್ಬಳಿ	1) ಕಬ್ಬಳಿ, 2) ಗೌರಿಪುರ (ದಾ), 3) ರಾಮಪುರ (ಬಿ), 4) ಮಹದೇವರಹಳ್ಳಿ, 5) ಹೊಸೂರು (ದಾ), 6) ಚೀರನಹಳ್ಳಿ, 7) ಮುದ್ಲಾಪುರ, 8) ಹೊಸಕೊಪ್ಪಲು (ದಾ), 9) ಹಳೇಕೊಪ್ಪಲು (ದಾ), 10) ಸೋಮನಹಳ್ಳಿ, 11) ಸೋಮನಹಳ್ಳಿ ಕಾವಲ್, 12) ಕೆ.ಹೊಸಹಳ್ಳಿ, 13) ಮಲ್ಲನಾಯಕನಹಳ್ಳಿ, 14) ನಿಡೂಡಿ, 15) ಚಿಟ್ಟನಹಳ್ಳಿ.
19	ಕಂದಲಿ	ಕಂದಲಿ	1) ಕಂದಲಿ, 2) ತಿಮ್ಮನಹಳ್ಳಿ, 3) ಈಚಲಹಳ್ಳಿ, 5) ಅಣಚಿಹಳ್ಳಿ, 6) ಎತ್ತಿನಕಟ್ಟೆ, 7) ಉಪ್ಪಳ್ಳಿ, 8) ಮೇದರಹಳ್ಳಿ, 9) ಮಳ್ಳಗೇನಹಳ್ಳಿ, 10) ಮುದ್ದನಹಳ್ಳಿ (ದಾ) ಹಂದಿನಕೆರೆ, 11) ಎ.ಕಾಟೀಹಳ್ಳಿ (ದಾ).
22	ಕೋರವಂಗಲ	ಕೋರವಂಗಲ	1) ಹೆಚ್. ಮೈಲನಹಳ್ಳಿ, 2) ಜೋಡಿ ಕೃಷ್ಣಾಪುರ, 3) ಜಕ್ಕೇನಹಳ್ಳಿ, 4) ಕೋರವಂಗಲ, 5) ಕೋರವಂಗಲ ಕಾವಲ್, 6) ಎ.ಕೆ.ಕಾಲೋನಿ, 7) ಚಿಕ್ಕಬೂವನಹಳ್ಳಿ, 8) ಕೊಮ್ಮನಹಳ್ಳಿ, 9) ಲಕ್ಷ್ಮೀಸಾಗರ.
34	ಶಂಕರನಹಳ್ಳಿ	ಶಂಕರನಹಳ್ಳಿ	1) ಬಿಲಗುಂದ, 2) ಕಟ್ಟಿಹೊಸಹಳ್ಳಿ, 3) ಗಾಡೇನಹಳ್ಳಿ, 4) ಗಾಡೇನಹಳ್ಳಿ ಕೊಪ್ಪಲು, 5) ಹೊನ್ನಮ್ಮನಹಳ್ಳಿ, 6) ಶಂಕರನಹಳ್ಳಿ, 7) ಗೋಪನಹಳ್ಳಿ, 8) ಗೋಳೇನಹಳ್ಳಿ, 9) ಮಲ್ಲಪ್ಪನಹಳ್ಳಿ, 10) ಜವೇನಹಳ್ಳಿ, 11) ವಡ್ಡರಕೊಪ್ಪಲು, 12) ಪಾರಸನಹಳ್ಳಿ, 13) ವಿರೂಪನಹಳ್ಳಿ, 14) ಸಿರಾಜ್ ಬೋರ ಕಾವಲು, 15) ಮಲ್ಲಿಗೆವಾಳು.
37	ಹಾಲುವಾಗಿಲು	ಹಾಲುವಾಗಿಲು	1) ಹಾಲುವಾಗಿಲು, 2) ಹಾಲುವಾಗಿಲು (ದಾ), 3) ಮಾರಗೋಡನಹಳ್ಳಿ, 4) ನಿಂಗೇಗೌಡನ ಕೊಪ್ಪಲು, 5) ಮಾರ್ಗನಹಳ್ಳಿ, 6) ಅಣ್ಣಿಗನಹಳ್ಳಿ, 7) ಬಿದರೆಕೆರೆ.
38	ತೇಜೂರು	ತೇಜೂರು	1) ತೇಜೂರು, 2) ಹಾಚಗೋಡನಹಳ್ಳಿ, 3) ರಾಚೇನಹಳ್ಳಿ, 4) ಗ್ಯಾರಹಳ್ಳಿ, 5) ಕಂಚಮಾರನಹಳ್ಳಿ, 6) ತವರದೇವರಕೊಪ್ಪಲು (ದಾ), 7) ದೊಡ್ಡಕೊಂಡಗುಳ.
4	ದೊಡ್ಡಪುರ (ಬಿ. ಕಾಟೀಹಳ್ಳಿ)	ದೊಡ್ಡಪುರ (ಬಿ. ಕಾಟೀಹಳ್ಳಿ)	ದೊಡ್ಡಪುರ (ಬಿ. ಕಾಟೀಹಳ್ಳಿ) ಗ್ರಾಮ ಪಂಚಾಯಿತಿಯು ಸಂಪೂರ್ಣ ಅಸ್ಥಿತ್ವ ಕಳೆದುಕೊಂಡಿರುತ್ತದೆ.
32	ಸತ್ಯಮಂಗಲ	ಸತ್ಯಮಂಗಲ	ಸತ್ಯಮಂಗಲ ಗ್ರಾಮ ಪಂಚಾಯಿತಿಯು ಸಂಪೂರ್ಣ ಅಸ್ಥಿತ್ವ ಕಳೆದುಕೊಂಡಿರುತ್ತದೆ.
13	ಹರಳಹಳ್ಳಿ	ಹರಳಹಳ್ಳಿ	ಹರಳಹಳ್ಳಿ ಗ್ರಾಮ ಪಂಚಾಯಿತಿಯು ಸಂಪೂರ್ಣ ಅಸ್ಥಿತ್ವ ಕಳೆದುಕೊಂಡಿರುತ್ತದೆ.
6	ಬೂವನಹಳ್ಳಿ	ಬೂವನಹಳ್ಳಿ	ಬೂವನಹಳ್ಳಿ ಗ್ರಾಮ ಪಂಚಾಯಿತಿಯು ಸಂಪೂರ್ಣ ಅಸ್ಥಿತ್ವ ಕಳೆದುಕೊಂಡಿರುತ್ತದೆ.
11	ಹಂದಿನಕೆರೆ (ದಾ) ಮಣಚನಹಳ್ಳಿ	ಹಂದಿನಕೆರೆ (ದಾ) ಮಣಚನಹಳ್ಳಿ	ಹಂದಿನಕೆರೆ (ದಾ) ಮಣಚನಹಳ್ಳಿ ಗ್ರಾಮ ಪಂಚಾಯಿತಿಯು ಸಂಪೂರ್ಣ ಅಸ್ಥಿತ್ವ ಕಳೆದುಕೊಂಡಿರುತ್ತದೆ.

(ಕೆ.ಎಸ್. ಲತಾ ಕುಮಾರಿ, ಭಾ.ಆ.ಸೇ.)
ಜಿಲ್ಲಾಧಿಕಾರಿ,
ಹಾಸನ ಜಿಲ್ಲೆ, ಹಾಸನ.

PR-48

ಕಂದಾಯ ಇಲಾಖೆ
ತಹಸೀಲ್ದಾರ್‌ರವರ ಕಾರ್ಯಾಲಯ
ಕಡೂರು–577 548, ಕಡೂರು ತಾಲ್ಲೂಕು ಚಿಕ್ಕಮಗಳೂರು ಜಿಲ್ಲೆ
ದೂರವಾಣಿ–08267, ತಾಲ್ಲೂಕು ಕಚೇರಿ–221240, ತಹಸೀಲ್ದಾರ್ ನಿವಾಸ–221400, ಫ್ಯಾಕ್ಸ್ –221240

ಸಂ.ಆರ್.ಆರ್.ಟಿ.ಸಿ.ಆರ್/04/2025-26 ದಿನಾಂಕ : 31.12.2025

ನಮೂನೆ–2 ಜೆ
ನಿಯಮ 9 ಸಿ ರ ಉಪನಿಯಮ (10)
ಅಧಿಸೂಚನೆ

ಉಪವಿಭಾಗಾಧಿಕಾರಿಗಳು, ತರೀಕೆರೆ ಉಪವಿಭಾಗ, ಚಿಕ್ಕಮಗಳೂರು ಜಿಲ್ಲೆ ಇವರ ವಿಚಾರಣಾ ನಡಾವಳಿಗಳ ಸಂಖ್ಯೆ: **ಎಲ್ ಎನ್ ಡಿ ಸಿ ಆರ್**/ 71–2025 ದಿಃ 23.12.2025 ರಂತೆ ಕರ್ನಾಟಕ ಭೂಸುದಾರಣಾ ಕಾಯಿದೆ 1961 ರ ಸೆಕ್ಷನ್ 38(ಎ) ರ ಉಪನಿಯಮ 2 ರಡಿಯಲ್ಲಿ ಈ ಕೆಳಕಂಡ ವ್ಯಕ್ತಿ / ವ್ಯಕ್ತಿಗಳು ವಾಸವಾಗಿರುವ ಜಮೀನಿನ ಬಗ್ಗೆ ಆದೇಶ ಹೊರಡಿಸಲಾಗಿದ್ದು, ಚಿಕ್ಕಮಗಳೂರು .ಜಿಲ್ಲೆ ಕಡೂರು ತಾಲ್ಲೂಕು ಮೂಲ ಗ್ರಾಮ **ಕಾನಗೊಂಡನಹಳ್ಳಿ** ಪ್ರಸ್ತಾಪಿತ ಹೊಸ ಕಂದಾಯ /ಉಪಕಂದಾಯ **ಕಾನಗೊಂಡನಹಳ್ಳಿ ಬಡಾವಣೆ-1** ಗ್ರಾಮದಲ್ಲಿ ಈ ಕೆಳಗೆ ವಿವರಿಸಿದಂತೆ ವಾಸಿಸುವ ಮನೆಯ ಮಾಲೀಕರಾಗಿ ನೊಂದಾಯಿಸಲು ಅರ್ಹರಾಗಿರುತ್ತಾರೆ.

ಕ್ರಮ ಸಂಖ್ಯೆ	ನೊಂದಾಯಿತ ಮನೆಯ ಮಾಲೀಕರ ಹೆಸರು	ಮೂಲ ಗ್ರಾಮ	ಹೊಸ ಕಂದಾಯ/ಉಪಗ್ರಾಮ	ಸ. ನಂ	ಮಂಜೂರಾದ ಜಾಗ/ಮನೆಯ ವಿಸ್ತೀರ್ಣ			ಚಕ್ಕುಬಂಧಿ				ಸಮುದಾಯಕ್ಕೆ ಮೀಸಲಾಗಿರುವ ಜಾಗ
					ಮನೆಯ ಮತ್ತು ಅದಕ್ಕೆ ಹೊಂದಿಕೊಂಡಿರುವ ಭೂ ಪ್ರದೇಶದ ವಿಸ್ತೀರ್ಣ (ಅಡಿಗಳಲ್ಲಿ)			ಪೂರ್ವ	ಪಶ್ಚಿಮ	ಉತ್ತರ	ದಕ್ಷಿಣ	
1	ಲತಾ ಕೋಂ ಶಿವಕುಮಾರ್	ಕಾನಗೊಂಡನಹಳ್ಳಿ	ಕಾನಗೊಂಡನಹಳ್ಳಿ ಬಡಾವಣೆ-1	1/1	29	25	725	ಖಾಲಿ ಜಾಗ	ಖಾಲಿ ಜಾಗ	ರಸ್ತೆ	ಖಾಲಿ ಜಾಗ	–
2	ಹನುಮಕ್ಕ ಕೋಂ ಸುನೀಲ್	ಕಾನಗೊಂಡನಹಳ್ಳಿ	ಕಾನಗೊಂಡನಹಳ್ಳಿ ಬಡಾವಣೆ-1	1/1	15	30	450	ರವಿ	ಹನುಮಂತ ಭೋವಿ	ದಾರಿ	ದಾರಿ	–
3	ಲಕ್ಷ್ಮೀ ದೇವಿ ಕೋಂ ಹನುಮಂತ ಭೋವಿ	ಕಾನಗೊಂಡನಹಳ್ಳಿ	ಕಾನಗೊಂಡನಹಳ್ಳಿ ಬಡಾವಣೆ-1	1/1	25	30	750	ಹನುಮಕ್ಕ	ಸಿದ್ದಮ್ಮ	ಖಾಲಿ ಜಾಗ	ಖಾಲಿ ಜಾಗ	–

R.N.I. No. KARBIL/2001/47147 POSTAL REGN. No. RNP/KA/BGS/2202/2017-19
Licensed to post without preayment WPP No. 297

ಕ್ರಮ ಸಂಖ್ಯೆ	ನೊಂದಾಯಿತ ಮನೆಯ ಮಾಲೀಕರ ಹೆಸರು	ಮೂಲ ಗ್ರಾಮ	ಹೊಸ ಕಂದಾಯ/ಉಪಗ್ರಾಮ	ಸ. ನಂ	ಮಂಜೂರಾದ ಜಾಗ/ಮನೆಯ ವಿಸ್ತೀರ್ಣ ಮನೆಯ ಮತ್ತು ಅದಕ್ಕೆ ಹೊಂದಿಕೊಂಡಿರುವ ಭೂ ಪ್ರದೇಶದ ವಿಸ್ತೀರ್ಣ (ಅಡಿಗಳಲ್ಲಿ)			ಚಕ್ಕುಬಂಧಿ				ಸಮುದಾಯಕ್ಕೆ ಮೀಸಲಾಗಿರುವ ಜಾಗ
								ಪೂರ್ವ	ಪಶ್ಚಿಮ	ಉತ್ತರ	ದಕ್ಷಿಣ	
4	ಸಿದ್ದಮ್ಮ ಕೋಂ ತಿಮ್ಮಾಭೋವಿ	ಕಾನಗೊಂಡನಹಳ್ಳಿ	ಕಾನಗೊಂಡನಹಳ್ಳಿ ಬಡಾವಣೆ-1	1/1	21	22	462	ಖಾಲಿ ಜಾಗ	ಖಾಲಿ ಜಾಗ	ಖಾಲಿ ಜಾಗ	ಹಿಡುವಳಿ	–
5	ಲಕ್ಷ್ಮೀದೇವಿ ಕೋಂ ನಾಗರಾಜ	ಕಾನಗೊಂಡನಹಳ್ಳಿ	ಕಾನಗೊಂಡನಹಳ್ಳಿ ಬಡಾವಣೆ-1	1/1	22	33	726	ರಸ್ತೆ	ಖಾಲಿ ಜಾಗ	ಖಾಲಿ ಜಾಗ	ಹಿಡುವಳಿ	–
6	ಜಯಂತಿ ಕೋಂ ರಘು ಭೋವಿ	ಕಾನಗೊಂಡನಹಳ್ಳಿ	ಕಾನಗೊಂಡನಹಳ್ಳಿ ಬಡಾವಣೆ-1	1/1	33	33	1089	ರಸ್ತೆ	ನಾಗರಾಜ	ಖಾಲಿ ಜಾಗ	ಹಿಡುವಳಿ	–

ನೊಂದಾಯಿತ ಮನೆಯ ಮಾಲೀಕರು, ಭೂ ಮಾಲೀಕರು ಹಾಗೂ ಸಾರ್ವಜನಿಕ ಮಾಹಿತಿಗಾಗಿ ಈ ಅಧಿಸೂಚನೆಯನ್ನು ಪ್ರಕಟಿಸಲಾಗಿರುತ್ತದೆ. ಈ ಬಗ್ಗೆ ಯಾವುದಾದರೂ ಆಕ್ಷೇಪಣೆಗಳು /ಸಲಹೆಗಳಿದ್ದಲ್ಲಿ ಈ ಅಧಿಸೂಚನೆಯನ್ನು ಪ್ರಕಟಿಸಿದ 7 ದಿನಗಳಲ್ಲಿ ಅಗತ್ಯ ದಾಖಲೆಗಳೊಂದಿಗೆ ತಹಶೀಲ್ದಾರರು ಕಡೂರುರವರಿಗೆ ಸಲ್ಲಿಸುವುದು .

ಸ್ಥಳ : ಕಡೂರು
ದಿನಾಂಕ : 31.12.2025

ತಹಶೀಲ್ದಾರ್
ಕಡೂರು ತಾಲ್ಲೂಕು

PR-49

ಮುದ್ರಕರು ಹಾಗೂ ಪ್ರಕಾಶಕರು:– ಸಂಕಲನಾಧಿಕಾರಿಗಳು, ಕರ್ನಾಟಕ ರಾಜ್ಯಪತ್ರ, ಸರ್ಕಾರಿ ವಿಭಾಗೀಯ ಮುದ್ರಣಾಲಯ, ಮೈಸೂರು.

VIJAY NELAMANGALA MUNIDALAPPA
Digitally signed by VIJAY NELAMANGALA MUNIDALAPPA
DN: c=IN, o=E-PROCUREMENT CELL CEG, 2.5.4.20=588b7cb3fea32bf043861231865695529a569e29a9077a76878b32da7621141, postalCode=560001, st=Karnataka, serialNumber=8b988a6f3520356f4f42212096c1e04f332345c514a0b57a32da5e4098b8c06019, cn=VIJAY NELAMANGALA MUNIDALAPPA
Date: 2026.03.24 16:27:12 +05'30'